بِسْمِ اللهِ الرَّحْمٰنِ الرَّحِيْمِ     نَحْمَدُهٗ وَنُصَلِّی عَلٰی رَسُوْلِهِ الْكَرِيْمِ     وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 01

ಸಂಚಿಕೆ: 41

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

22 ಅಕ್ಟೋಬರ್ 2020, 22 ಅಖಾ 1399 ಹಿಜರಿ ಶಮ್‌ಸಿ,
04 ರಬಿಉಲ್ ಅವ್ವಲ್ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اَفَلَا يَتَدَبَّرُوْنَ الْقُرْاٰنَ ؕ
وَلَوْ كَانَ مِنْ عِنْدِ غَيْرِ اللّٰهِ
لَوَجَدُوْا فِيْهِ اخْتِلَافًا كَثِيْرًا

(ಅನ್ನಿಸಾಅ್:83)

ಅಂದರೆ: ಅವರು ಖುರ್‌ಆನಿನ ಕುರಿತು ಚಿಂತನೆ ಮಾಡುವುದಿಲ್ಲವೇ? ಅದು ಅಲ್ಲಾಹೇತರರಿಂದ ಬಂದದ್ದಾಗಿದ್ದರೆ ಖಂಡಿತವಾಗಿಯೂ ಅವರು ಅದರಲ್ಲಿ ಬಹಳ ವೈರುದ್ಧ್ಯಗಳನ್ನು ಕಾಣುತ್ತಿದ್ದರು.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### 'ಸಲಾಮ್' ಗಿಂತ ಮುಂಚೆ 'ಸಜ್ದ ಸಹೂ' 'ಸಜ್ದ' ದಲ್ಲಿ ಮೊಣಕೈ ನೆಲಕ್ಕೆ ತಾಗಿರಬಾರದು!

* ಹಝ್‌ರತ್ ಅಬ್ದುಲ್ಲ ಬಿನ್ ಮಾಲಿಕ್ ಬಿನ್ ಬಹೀನ ರವರಿಂದ ವರದಿಯಾಗಿದೆ- ನಬಿ(ಸ) ನಮಾಝ್ ನಿರ್ವಹಿಸುವಾಗ ಎರಡೂ ಕೈಗಳನ್ನು ಬಾಹುಗಳಿಂದ ದೂರವಿರಿಸುತ್ತಿದ್ದರು. ಎಲ್ಲಿಯವರೆಗೆ ಎಂದರೆ ಕಂಕುಳುಗಳ ಬಿಳಿವು ಕಾಣುತ್ತಿದ್ದವು.

* ಹಝ್‌ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ:- ನಬಿ(ಸ) ಹೇಳಿದರು- "ಸಜ್ದದಲ್ಲಿ ಮಧ್ಯಮ ಸಾಧಿಸಬೇಕು ಮತ್ತು ನಿಮ್ಮಲ್ಲಿ ಯಾರು ಸಹ ತನ್ನ ಬಾಹುಗಳನ್ನು ನಾಯಿಯ ರೀತಿ ಹಾಸಬಾರದು.

* ಹಝ್‌ರತ್ ಅಬ್ದುಲ್ಲಾ ಬಿನ್ ಬಹೀನ ವರದಿ ಮಾಡುತ್ತಾರೆ:- ನಬಿ(ಸ) ಝುಹರ್ ನಮಾಝ್ ನಿರ್ವಹಿಸಿಕೊಟ್ಟರು. ಅವರು ಮೊದಲ ಎರಡು 'ರಕಾಅತ್' ಗಳಲ್ಲಿ ನಿಂತುಕೊಂಡರು, ಕುಳಿತುಕೊಳ್ಳಲಿಲ್ಲ, ಜನರು ಸಹ ಅವರೊಟ್ಟಿಗೆ ನಿಂತುಕೊಂಡರು, ಅಲ್ಲಾಹು ಅಕ್‌ಬರ್ ಎಂದು ಹೇಳಿದರು ಮತ್ತು ಸಲಾಮ್ ನೆರವೇರುವ ಮೊದಲು ಎರಡು ಸಜ್ದಗಳನ್ನು ಮಾಡಿದರು. ತದನಂತರ ಸಲಾಮ್ ನೆರವೇರಿಸಿದರು. **(ಸಹೀಹ್ ಬುಖಾರಿ ಸಂಪುಟ-2, ಕಿತಾಬುಲ್ ಅಝಾನ್, ಮುದ್ರಣ ಖಾದಿಯಾನ್ 2006)**

## ರಿಝ್ಖ್ ಇಬ್‌ತಿಲಾ ಮನುಷ್ಯನನ್ನು ಅಲ್ಲಾಹನಿಂದ ದೂರಮಾಡುತ್ತದೆ ಅಲ್ಲದೆ ಅವನನ್ನು ನಾಶಗೊಳಿಸುತ್ತದೆ.

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಆಧ್ಯಾತ್ಮಿಕ ಶಕ್ತಿಗಳ ಮೇಲೆ ಆರಾಧ್ಯನ ಪ್ರಭಾವ

ಮನುಷ್ಯನ ಆಧ್ಯಾತ್ಮಿಕ ಶಕ್ತಿಗಳ ಮೇಲೆ ಅವನ ಆರಾಧ್ಯನ ಪ್ರಭಾವ ಬೀಳುತ್ತದೆ. ನೋಡಿರೀ!! ಯಾವೊಬ್ಬ ಹಿಂದು ಬಂದರೆ ದೂರದಿಂದಲೆ ಅವನಿಂದ ಅಲಕ್ಷ್ಯತನದ ವಾಸನೆ ಬರುತ್ತದೆ. ಅದಕ್ಕೆ ಕಾರಣವೇನು? ಏಕೆಂದರೆ ಅವರದು ಕೃತಕ ಆರಾಧ್ಯವಾದರೂ ಅಲಕ್ಷ್ಯವಹಿಸಿದ್ದಾನೆ. ಎಲ್ಲಿಯವರೆಗೆಂದರೆ ಬ್ರಿಟೀಷರಂತೆ ಊಟಕ್ಕೆ ಬೆಲ್ (ಗಂಟೆ) ಬಾರಿಸುವುದಿಲ್ಲವೋ ಅಲ್ಲಿಯವರೆಗೆ ಜಾಗೃತಗೊಳ್ಳುವುದಿಲ್ಲ. ಇದೇ ಕಾರಣದಿಂದ ಆಧ್ಯಾತ್ಮಿಕ ಜೀವನದಿಂದ ಯಾವ ಜ್ಞಾನ ಮತ್ತು ಶಮನ ದೊರೆಯಬಹುದೋ ಅದು ದೊರೆಯುತ್ತಿಲ್ಲ. ಹಾಗೆ ನೋಡಿದರೆ ಐಹಿಕ ದೃಷ್ಟಿಯಿಂದ ಅವರು ತುಂಬ ಶ್ರೀಮಂತರು ಮತ್ತು ಐಶ್ವರ್ಯವಂತರಾಗಿರುತ್ತಾರೆ.

### ರಿಝ್ಖ್ ಇಬ್‌ತಿಲ ಮತ್ತು ರಿಝ್ಖ್ ಇಸ್ತಿಫಾ

ವಾಸ್ತವವೇನೆಂದರೆ ಜೀವನಾಧಾರ (ರಿಝ್ಖ್) ದ ಎರಡು ವಿಧಗಳಿರುತ್ತದೆ. ಒಂದು 'ಇಬ್ತಿಲ' ಎರಡನೆಯದು 'ಇಸ್ತಿಫಾ'. ರಿಝ್ಖ್ ಇಬ್‌ತಿಲ ನೆಲೆಯಲ್ಲಿ ರಿಝ್ಖ್ (ಜೀವನಾಧಾರ) ದಲ್ಲಿ ಅಲ್ಲಾಹನೊಂದಿಗೆ ಯಾವ ಸಂಬಂಧವೂ ಇಲ್ಲ, ಬದಲು ಈ ರಿಝ್ಖ್ ಮನುಷ್ಯನನ್ನು ಅಲ್ಲಾಹನಿಂದ ದೂರಮಾಡುತ್ತದೆ. ಕೊನೆಗೆ ಅವನನ್ನು ನಾಶಗೊಳಿಸುತ್ತದೆ. ಆ ಬಗ್ಗೆ ಅಲ್ಲಾಹನು ಹೇಳುತ್ತಾನೆ: **"ಲಾತುಲ್‌ಹಿಕುಮ್ ಅಮ್ವಾಲಕುಮ್"** (ಅಲ್‌ಮುನಾಫಿಖೂನ್:10) ನಿಮ್ಮ ಸಂಪತ್ತು ನಿಮಗೆ ವಿನಾಶ ಮಾಡದಿರಲಿ ಮತ್ತು ರಿಝ್ಖ್ ಇಸ್ತಿಫಾ ಅಲ್ಲಾಹನಿಗಾಗಿರುತ್ತದೆ. ಅಂತಹ ಜನರಿಗೆ ಅಲ್ಲಾಹನೇ ಸಾಕಾಗಿರುತ್ತಾನೆ. ಏನೆಲ್ಲ ಅವರ ಬಳಿ ಇರುತ್ತದೆಯೋ ಅದು ಅಲ್ಲಾಹನದ್ದೇ ಎಂದು ಭಾವಿಸುತ್ತಾನೆ ಮತ್ತು ತನ್ನ ನಡತೆಯಿಂದಲೂ ಸಾಬೀತು ಪಡಿಸುತ್ತಾರೆ.

ಸಹಾಬರ ಸ್ಥಿತಿಯನ್ನು ನೋಡಿರಿ! ಪರೀಕ್ಷೆಯ ಸಮಯ ಬಂದಾಗ ತಮ್ಮಲ್ಲಿ ಏನೆಲ್ಲ ಇದ್ದವು ಅವೆಲ್ಲ ಅಲ್ಲಾಹನ ಮಾರ್ಗದಲ್ಲಿ ನೀಡಿದರು. ಹಝ್‌ರತ್ ಅಬೂಬಕ್ಕರ್ ಸಿದ್ದೀಖ್(ರ) ರವರು ಪ್ರಪ್ರಥಮವಾಗಿ ಕಂಬಳಿ ಹೊದ್ದುಕೊಂಡು ಬಂದರು. ಆ ಕಂಬಳಿಗೆ ಎಂಥ ಪ್ರತಿಫಲ ಸಿಕ್ಕಿತು ಅವರು ಪ್ರಪ್ರಥಮ ಖಲೀಫರಾದರು. ತಾತ್ಪರ್ಯವೇನೆಂದರೆ ಪ್ರತಿಫಲ ಪಡೆಯಲು ಮತ್ತು ಆಧ್ಯಾತ್ಮಿಕ ಉನ್ನತಿ ಸಾಧಿಸಲು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ ಸಂಪತ್ತೇ ಕೆಲಸಕ್ಕೆ ಬರುವುದು.

**(ಮಲ್‌ಫೂಝಾತ್, ಸಂಪುಟ-1, ಪುಟ-194-195, ಮುದ್ರಣ ಖಾದಿಯಾನ್ 2018)**

## ಇಡೀ ಸಮೂದಾಯದ ಗುಣ ಲಕ್ಷಣವೂ ಹೇಗಿರಬೇಕೆಂದರೆ ಯಾವೊಬ್ಬ ವ್ಯಕ್ತಿಯು ನಿಧನ ಹೊಂದಿದರೆ ಆತನ ಮಕ್ಕಳ ಪಾಲನೆ ಪೋಷಣೆ ಯಾರು ಮಾಡುವರು ಎಂಬ ಪ್ರಶ್ನೆ ಉದ್ಭವವಾಗಬಾರದು.

ಸಯ್ಯದುನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

"ಅನಾಥರನ್ನು ನೋಡಿಕೊಳ್ಳುವುದು ಮತ್ತು ವಿಧವೆಯರೊಡನೆ ಉತ್ತಮ ವರ್ತನೆ, ಈ ಎರಡು ಗುಣಗಳು ಹೇಗಿವೆ ಎಂದರೆ ಅದು ಸಮುದಾಯದಲ್ಲಿ ಸಾಹಸ ಮತ್ತು ವೀರತೆಗೆ ಜನ್ಮ ನೀಡುತ್ತವೆ. ಈ ಗುಣಗಳು ಸಮುದಾಯವು ಹೊಂದದಿದ್ದರೆ ಅದರ ಬದಲು ಕೆಲವರು ಅನಾಥರನ್ನು ಇರಿಸಿಕೊಂಡಿರುತ್ತಾರೆ ಅವರ ವರ್ತನೆ ಅನಾಥರೊಂದಿಗೆ ಹೇಗಿರುತ್ತದೆ ಎಂದರೆ ಆ ಅನಾಥರ ಸ್ಥಿತಿ ನೌಕರ ಅಷ್ಟೆ ಅಲ್ಲ ನೌಕರಿಗಿಂತ ಕಡೆಯಾಗಿರುತ್ತದೆ, ಚಿಕ್ಕ ಚಿಕ್ಕ ವಿಷಯಕ್ಕೆ ಅವರನ್ನು ಹೊಡೆಯುತ್ತಾರೆ, ಪೀಡಿಸುತ್ತಾರೆ, ಹೀಗಿದ್ದರೆ ಯಾವ ವ್ಯಕ್ತಿ ಮರಣ ಹೊಂದಲು ಇಚ್ಛಿಸುವನು? ಪ್ರತಿಯೊಬ್ಬ ವ್ಯಕ್ತಿಯೂ ಮರಣ ಹೊಂದಲು ಭಯಭೀತನಾಗುವನು ಮತ್ತು ಆತನು ನನ್ನ ಮರಣ ನನ್ನ ಮಕ್ಕಳ ಮರಣವಾಗಿದೆ, ನನ್ನ ಪತ್ನಿಯ ಮರಣವಾಗಿದೆ ಎಂದು ಭಾವಿಸುವನು. ನಾನು ಹೇಗೆ ಸಾಯುವುದು? ಯಾರಿಗಾಗಿ ಸಾಯುವುದು? ಆದುದರಿಂದ ಅವಶ್ಯಕವಾಗಿರುವುದೇನೆಂದರೆ ಇಡೀ ಸಮುದಾಯದ ಗುಣಲಕ್ಷಣ ಹೇಗಾಗಬೇಕೆಂದರೆ ವ್ಯಕ್ತಿಯೊಬ್ಬ ನಿಧನ ಹೊಂದಿದರೆ ಆತನ ಮಕ್ಕಳ ಪಾಲನೆ ಪೊಷಣೆ ಮಾಡುವವರು ಯಾರು? ಎಂಬ ಪ್ರಶ್ನೆ ಉದ್ಭವವಾಗಬಾರದು. ಅದರ ಬದಲು ಜನರು ಸ್ವಯಂ ಧಾವಿಸಿ ಹೋಗಬೇಕು. ಆ ಮಕ್ಕಳನ್ನು ಆಲಂಘಿಸಿಕೊಳ್ಳಲು, ಅವರನ್ನು ತನ್ನ ಮನೆಯಲ್ಲಿ ಇರಿಸಿಕೊಳ್ಳಲು, ಅವರನ್ನು ತನ್ನ ಮಕ್ಕಳಂತೆ ಅಷ್ಟೆ ಅಲ್ಲ ತನ್ನ ಮಕ್ಕಳಿಗಿಂತಲೂ ಹೆಚ್ಚಾಗಿ ಪ್ರೀತಿ ವಾತ್ಸಲ್ಯದಿಂದ ನೋಡಿಕೊಳ್ಳಲು.

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲಘಟ್ಟದ ಒಂದು ಘಟನೆ ಹೀಗಿದೆ. ಒಂದು ಮಗು ಅನಾಥನಾದನು. ಸಹಾಬರು ಜಗಳವಾಡಲು ಪ್ರಾರಂಭಿಸಿದರು- ಅವರಲ್ಲಿ ಒಬ್ಬರು ಹೇಳುತ್ತಿದ್ದರು, ಆ ಮಗುವಿನ ಪಾಲನೆ ಪೋಷಣೆ ನಾನು ಮಾಡುವೆನು, ಇನೊಬ್ಬರು ಹೇಳುತ್ತಿದ್ದರು ನಾನು ಮಾಡುವೆನು ಎಂದು. ಕೊನೆಗೆ ಈ ಸಮಸ್ಯೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿಗೆ ಹೋಯಿತು, ಅವರು ಹೇಳಿದರು:- ಆ ಮಗುವಿನ ಇಚ್ಛೆಯನ್ನು ಕೇಳಿ ಆತನು ಎಲ್ಲಿ ಹೋಗಲು ಇಚ್ಛಿಸುವನೋ ಅವರಿಗೆ ಒಪ್ಪಿಸಿರಿ, ಆದರೆ ಇಂದು ಪರಿಸ್ಥಿತಿ ಏನಾಗಿದೆ ಎಂದರೆ ಯಾರಾದರೊಬ್ಬ ವ್ಯಕ್ತಿ ಮರಣ ಹೊಂದುವಾಗ ಎಲ್ಲದಕ್ಕಿಂತ ದೊಡ್ಡ ಚಿಂತೆ ಆತನಿಗೆ ತನ್ನ ಪತ್ನಿ, ಮಕ್ಕಳ ಕುರಿತು ಆಗಿರುತ್ತದೆ. ಅವರ ಪಾಲನೆ ಪೋಷಣೆ ಯಾರು ಮಾಡುವರು, ಯಾರು ಅವರನ್ನು ನೋಡಿಕೊಳ್ಳುವರು, ಯಾರು ಅವರಿಗೆ ಪ್ರೀತಿ ಸ್ನೇಹ ನೀಡುವರು. ಆ ವ್ಯಕ್ತಿ ಮರಣ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಮಕ್ಕದ ಜನರು ಹಝ್ರತ್ ಬಿಲಾಲ್‌ರ ಕಾಲುಗಳಿಗೆ ಹಗ್ಗಕಟ್ಟಿ ಅವರನ್ನು ಗಲ್ಲಿಗಳಲ್ಲಿ ಎಳೆದುಕೊಂಡು ಹೋಗುತ್ತಿದ್ದರು. ಮಕ್ಕದ ಗಲ್ಲಿಗಳು ಮತ್ತು ಮಕ್ಕದ ಮೈದಾನ ಬಿಲಾಲ್‌ರಿಗೆ ಸುರಕ್ಷೆಯ ಸ್ಥಳವಾಗಿರಲಿಲ್ಲ. ಬದಲಿಗೆ ಕಠಿಣ ಶಿಕ್ಷೆ, ನಿಂದನೆ ಮತ್ತು ಅಪಹಾಸ್ಯದ ಸ್ಥಳವಾಗಿತ್ತು.**

---

**ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಿಲಾಲ್‌ರ ಕೈಯಲ್ಲಿ ಒಂದು ಧ್ವಜವನ್ನು ಕೊಟ್ಟು ಹೀಗೆ ಘೋಷಿಸಲು ಹೇಳಿದರು: ಹೇ ಮಕ್ಕದ ಸರದಾರರೇ, ನೀವು ಈಗ ನಮ್ಮ ಜೀವವನ್ನು ರಕ್ಷಿಸಲು ಬಯಸುವುದಾದರೆ, ಹಝ್ರತ್ ಬಿಲಾಲ್‌ರ ಧ್ವಜದ ಕೆಳಗೆ ಬನ್ನಿರಿ. ಯಾರ ಎದೆಯ ಮೇಲೆ ಮಕ್ಕದ ದೊಡ್ಡ ದೊಡ್ಡ ಸರದಾರರು ಕುಣಿದಾಡುತ್ತಿದ್ದರೋ ಅಂತಹ ಬಿಲಾಲ್‌ರ ಬಗ್ಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾರೆ: ಇಂದು ನಿಮ್ಮ ಜೀವಗಳು ಸುರಕ್ಷಿತವಾಗಬೇಕಾದರೆ, ಅದಕ್ಕಿರುವ ಮಾರ್ಗವೆಂದರೆ, ನೀವು ಬಿಲಾಲ್‌ರ ದಾಸ್ಯದಲ್ಲಿ ಬನ್ನಿರಿ. ಸತ್ಯದಲ್ಲಿ ಬಿಲಾಲ್ ಗುಲಾಮರಾಗಿದ್ದರು, ಅವರು ಯಜಮಾನರಾಗಿದ್ದರು.**

**ಯಥಾರ್ಥ ಸ್ಥಾನ ಲಭಿಸಬೇಕಾದರೆ ತ್ಯಾಗಗಳನ್ನು ಮಾಡಬೇಕಾಗುತ್ತದೆ. ಇದು ಇಸ್ಲಾಮಿನ ಮನೋಹರವಾದ ಪಾಠವಾಗಿದೆ. ಯಾರು ತ್ಯಾಗಗಳನ್ನು ಮಾಡುತ್ತಾರೋ, ಆರಂಭದಿಂದಲೇ ನಿಷ್ಠೆಯನ್ನು ತೋರಿಸುತ್ತಾರೋ ಅವರ ಪದವಿ ಹೇಗಿದ್ದರೂ ಉನ್ನತವೇ ಆಗಿರುವುದು. ಅವರು ನೀಗ್ರೋ ಗುಲಾಮರಾಗಿದ್ದರೂ ಅಥವಾ ಬೇರೆ ಯಾವುದೇ ವರ್ಗದ ಗುಲಾಮರಾಗಿದ್ದರೂ ಸರಿ.**

**ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕನಸಲ್ಲಿ ಕಂಡರು. ಅವರು ಹೀಗೆ ಹೇಳಿದರು: ಹೇ ಬಿಲಾಲ್, ಇದೆಂತಹ ಕಲ್ಲು ಹೃದಯ ನಿನ್ನದು. ನನ್ನನ್ನು ಬಂದು ಝಿಯಾರತ್ ಮಾಡಲು ನಿನಗೆ ಸಮಯವಾಗಲಿಲ್ಲವೇ? ಹಝ್ರತ್ ಬಿಲಾಲ್ ಬಹಳ ದುಃಖದ ಸ್ಥಿತಿಯಲ್ಲಿ ನಿದ್ದೆಯಿಂದ ಎಚ್ಚೆತ್ತರು. ಸಿರಿಯಾದಲ್ಲಿದ್ದ ಅವರು ಸವಾರರಾಗಿ ಮದೀನಕ್ಕೆ ಬಂದರು.**

---

**ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಅಧ್ದಿನ್, ಹಬ್‌ಶರಲ್ಲಿ ಮೊದಲಿಗರು ಪ್ರವಾದಿ ಮುಹಮ್ಮದ್(ಸ)ರವರೊಂದಿಗೆ ನಿಷ್ಠೆಯ ಸಂಬಂಧ ಹೋಂದಿದ ಬದರಿ ಸಹಾಬಿಯಾದ ಹಝ್ರತ್ ಬಿಲಾಲ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18–09–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಬದರೀ ಸಹಾಬಿಯರಲ್ಲಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ಕಳೆದ ಖುತ್‌ಬದಲ್ಲಿ ಮಾಡಲಾಗಿತ್ತು. ಅದರ ಉಳಿದ ಭಾಗವನ್ನು ಇಂದು ಪ್ರಸ್ತಾಪಿಸುತ್ತೇನೆ.

ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಖೈಬರ್ ಯುದ್ಧದಿಂದ ಮರಳಿ ಬರುವಾಗ ರಾತ್ರಿ ಪೂರ್ತಿ ಯಾತ್ರೆಯಲ್ಲಿದ್ದ ಕಾರಣದಿಂದ ನಿದ್ದೆ ಬಂದಾಗ ವಿಶ್ರಾಂತಿ ಪಡೆಯಲು ಒಂದು ಜಾಗದಲ್ಲಿ ತಂಗಿದರು. ಇಂದು ರಾತ್ರಿ ನಮ್ಮ ನಮಾಝಿನ ಸಂರಕ್ಷಣೆ ನೀನು ವಹಿಸು ಎಂದು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರೊಡನೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು. ಎಂದರೆ, ನಮಾಝಿನ ಸಮಯದ ಬಗ್ಗೆ ಗಮನವಹಿಸಿ ಫಜ್ರ್ ನಮಾಝ್ ಸಮಯದಲ್ಲಿ ಎಬ್ಬಿಸಲು ನಿರ್ದೇಶಿಸಿದ್ದರು. ಅನಂತರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ತಮ್ಮ ಶಕ್ತಿಯಾನುಸಾರ ರಾತ್ರಿ ಸಮಯದಲ್ಲಿ ನಫ್ಲ್ ನಮಾಝ್ ನಿರ್ವಹಿಸುತ್ತಾ ಹೋದರು ಹಾಗೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಇತರ ಸಹಾಬಿಯರು ನಿದ್ದೆ ಹೋದರು. ಫಜ್ರ್ ಸಮಯಕ್ಕೆ ಸ್ವಲ್ಪ ಮುಂಚಿತವಾಗಿ ಪ್ರಭಾತದ ದಿಕ್ಕಿಗೆ ಮುಖಮಾಡಿ, ಎಂದರೆ, ಸೂರ್ಯ ಉದಯಿಸುವ ದಿಕ್ಕನ್ನು ನೋಡುತ್ತಾ ತನ್ನ ಸವಾರಿ ಮೃಗಕ್ಕೆ ಒರಗಿಕೊಂಡು, ಅದರ ಆಸರೆ ಪಡೆಯುತ್ತಾ ಕುಳಿತುಕೊಂಡರು. ತನ್ನ ಒಂಟೆಗೆ ತಾಗಿಕೊಂಡು ಕುಳಿತುಕೊಂಡಿದ್ದ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರನ್ನು ಅಲ್ಪ ಸಮಯದಲ್ಲೇ ನಿದ್ದೆ ಆವರಿಸಿತು. ಹೀಗೆ ಬಲಾಲ್ ಎಚ್ಚರಗೊಳ್ಳಲಿಲ್ಲ, ಅದೇ ರೀತಿಯಲ್ಲಿ ಸಹಾಬಿವರ್ಯರಲ್ಲಿ ಯಾರೂ ಎಚ್ಚರಗೊಳ್ಳಲಿಲ್ಲ. ಅವರ ಮೇಲೆ ಸೂರ್ಯನ ಬೆಳಕು ತಗುಲಿದಾಗ, ಎಲ್ಲರಿಗಿಂತ ಮುಂಚೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಿದ್ದೆಯಿಂದ ಎಚ್ಚೆತ್ತರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಚಿಂತಿತರಾಗಿ, ಹೇ ಬಿಲಾಲ್, ಹೇ ಬಿಲಾಲ್ ಎಂದು ಕರೆದರು. ಬಿಲಾಲ್ ಹೇಳಿದರು: ಯಾ ರಸೂಲುಲ್ಲಾಹ್ ನನ್ನ ತಂದೆ ತಾಯಿ ನಿಮಗೆ ಅರ್ಪಣವಾಗಲಿ, ನಿಮ್ಮ ಆತ್ಮವನ್ನು ತಡೆದಿಟ್ಟಿದ್ದ ಅದೇ ಅಸ್ತಿತ್ವ ನನ್ನ ಆತ್ಮವನ್ನು ತಡೆದಿಟ್ಟಿತ್ತು. ಎಂದರೆ, ನನ್ನನ್ನೂ ನಿದ್ದೆ ಆವರಿಸಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಹೊರಡೋಣ. ಹೀಗೆ ಅವರೆಲ್ಲರೂ ತಮ್ಮ ತಮ್ಮ ಸವಾರಿಗಳನ್ನು ಸ್ವಲ್ಪ ಮುಂದಕ್ಕೆ ಕೊಂಡುಹೋದ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವುಝೂ ಮಾಡಲಿಕ್ಕಾಗಿ ಸವಾರಿಗಳನ್ನು ನಿಲ್ಲಿಸಿದರು. ಅನಂತರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರೊಡನೆ ಇಖಾಮತ್ ನೀಡಲು ಹೇಳಿದರು. ಹೀಗೆ ಸೂರ್ಯ ಉದಯಿಸಿದ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಬೆಳಿಗ್ಗಿನ ನಮಾಝಿನ ಇಮಾಮತ್ ವಹಿಸಿ ಎಲ್ಲರೊಂದಿಗೆ ನಮಾಝ್ ನಿರ್ವಹಿಸಿದರು. ನಮಾಝ್ ನಿರ್ವಹಿಸಿದ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಮಾಝ್ ಅನುಷ್ಠಿಸಲು ಮರೆತುಬಿಟ್ಟರೆ, ನೆನಪು ಬಂದೊಡನೆ ಅದನ್ನು ನಿರ್ವಹಿಸಿರಿ. ಏಕೆಂದರೆ ಅಲ್ಲಾಹನ ನೆನಪಿಗಾಗಿ ನಮಾಝ್ ನೆಲೆನಿಲ್ಲಿಸಬೇಕೆಂದು ಅವನು ಹೇಳಿರುವನು.
(ಸನನ್ ಇಬ್ನೆ ಮಾಜ, ಕಿತಾಬುಸ್ಸಲಾತ್, ಹದೀಸ್–697)

ಮಕ್ಕಾ ವಿಜಯದ ದಿನ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಅ್‌ಬ ಮಂದಿರದ ಒಳಗೆ ಪ್ರವೇಶಿಸಿದಾಗ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಸಹ ಒಟ್ಟಿಗೆ ಇದ್ದರು. ಹಝ್ರತ್ ಇಬ್ನು ಉಮರ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

ಮಕ್ಕಾ ವಿಜಯದಂದು ಮಕ್ಕ ಪಟ್ಟಣವನ್ನು ಪ್ರವೇಶಿಸಿದರು. ಹರ್ಝ್‌ರತ್ ಉಸ್ಮಾನ್ ಬಿನ್ ತಲ್‌ಹರನ್ನು ಕರೆದರು. ಅವರು ಕಅ್‌ಬದ ಬಾಗಿಲನ್ನು ತೆರೆದಾಗ ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಹರ್ಝ್‌ರತ್ ಬಿಲಾಲ್, ಹರ್ಝ್‌ರತ್ ಉಸಾಮ ಬಿನ್ ಝೈದ್ ಮತ್ತು ಹರ್ಝ್‌ರತ್ ಉಸ್ಮಾನ್ ಬಿನ್ ತಲ್‌ಹ ಒಳಗೆ ಹೋದರು. ಅನಂತರ ಬಾಗಿಲನ್ನು ಮುಚ್ಚಿದರು. ಅವರು ಅಲ್ಲಿ ಸ್ವಲ್ಪ ಹೊತ್ತು ಇದ್ದುಕೊಂಡು ಹೊರಗೆ ಬಂದರು. ಹರ್ಝ್‌ರತ್ ಇಬ್ನು ಉಮರ್ ಹೇಳುತ್ತಾರೆ: ನಾನು ಬೇಗನೇ ಮುಂದಕ್ಕೆ ಧಾವಿಸಿ ಇದರ ಬಗ್ಗೆ ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರೊಡನೆ ಕೇಳಿದೆ. ಅವರು ಹೇಳಿದರು: ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕಅ್‌ಬದಲ್ಲಿ ನಮಾಝ್ ನಿರ್ವಹಿಸಿದ್ದರು. ಯಾವ ಜಾಗದಲ್ಲಿ ಎಂದು ನಾನು ಕೇಳಿದೆ. ಆ ಕಂಬಗಳ ನಡುವೆ ಎಂದು ಅವರು ಹೇಳಿದರು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಷ್ಟು ರಕಅತ್ ನಮಾಝ್ ಮಾಡಿದರು ಎಂದು ಕೇಳಲು ನಾನು ಮರೆತುಬಿಟ್ಟೆ. (ಸಹೀಹ್ ಬುಖಾರಿ, ಕಿತಾಬುಸ್ಸಲಾತ್, ಹದೀಸ್-468)

ಕಅ್‌ಬದ ಒಳಗೆ ಯಾವ ಜಾಗದಲ್ಲಿ ನಿಂತುಕೊಂಡು ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝ್ ನಿರ್ವಹಿಸಿದ್ದರು ಎಂದು ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಜನರಿಗೆ ಹೇಳಿಕೊಡುತ್ತಿದ್ದರು. ಹರ್ಝ್‌ರತ್ ಇಬ್ನು ಅಬೀ ಮಲೀಕ ವರದಿ ಮಾಡುತ್ತಾರೆ: ಮಕ್ಕ ವಿಜಯದಂದು ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರಿಗೆ ಕಅ್‌ಬದ ಚಾವಣಿ, ಎಂದರೆ ಅದರ ಮೇಲೇರಿ ಅಧಾನ್ ನೀಡಲು ಆದೇಶಿಸಿದರು. ಹೀಗೆ ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಕಅ್‌ಬ ಮಂದಿರದ ಅಟ್ಟವನ್ನೇರಿ ಅಧಾನ್ ಕೊಟ್ಟರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-177, ದಾರುಲ್‌ಕುತುಬ್ ಇಲ್ಮಿಯ ಬೈರೂತ್ 2017)

ಹರ್ಝ್‌ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹುಮಕ್ಕ ವಿಜಯದ ವೇಳೆಯ ಘಟನೆಯಲ್ಲಿ ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಬಗ್ಗೆ ವಿವರಿಸುತ್ತಾ ಹೇಳುತ್ತಾರೆ: ಹರ್ಝ್‌ರತ್ ಅಬ್ಬಾಸ್ ರಝಿಯಲ್ಲಾಹು ಅನ್‌ಹು ಅಬೂಸುಫ್‌ಯಾನ್‌ರನ್ನು ಕರೆದುಕೊಂಡು ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಗೆ ಬಂದರು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೂಸುಫ್‌ಯಾನ್‌ರನ್ನು ನೋಡಿ ಹೇಳಿದರು: ನಿನ್ನ ಸ್ಥಿತಿ ಎಷ್ಟು ಕೆಟ್ಟದು, ದೇವನೊಬ್ಬನೇ ಎಂದು ಈಗಲೂ ನಿನಗೆ ನಂಬಿಕೆ ಉಂಟಾಗುವುದಿಲ್ಲವೇ? ಅಬೂಸುಫ್‌ಯಾನ್ ಹೇಳಿದ: ನಂಬಿಕೆ ಹೇಗೆ ಬರದಿರುವುದು? ಬೇರೆ ದೇವರಿದ್ದರೆ, ನಮ್ಮ ನೆರವಿಗೆ ಬರಬೇಕಿತ್ತಲ್ಲವೇ? ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿನ್ನ ಸ್ಥಿತಿ ಎಷ್ಟು ಕೆಟ್ಟದು, ಮುಹಮ್ಮದ್ ಅಲ್ಲಾಹನ ಪ್ರವಾದಿಯೆಂದು ನಿನಗೆ ಈಗಲೂ ವಿಶ್ವಾಸ ಬರಲಿಲ್ಲವೇ? ಅಬೂಸುಫ್‌ಯಾನ್ ಹೇಳಿದ: ಇದರ ಬಗ್ಗೆ ನನಗೆ ಈಗಲೂ ದೃಢವಿಶ್ವಾಸ ಉಂಟಾಗಿಲ್ಲ. ಹೇ ನತದೃಷ್ಟ ಬೈಅತ್ ಮಾಡು ಎಂದು ಹರ್ಝ್‌ರತ್ ಅಬ್ಬಾಸ್ ರಝಿಯಲ್ಲಾಹು ಅನ್‌ಹು ಹೇಳಿದರು. ಈಗ ನಿನ್ನ ಮತ್ತು ಸಮುದಾಯದ ಜೀವ ಸುರಕ್ಷಿತವಾಗುತ್ತಿದೆ. ಸರಿ ಬೈಅತ್ ಮಾಡುತ್ತೇನೆ ಎಂದು ಅಬು ಸುಫ್‌ಯಾನ್ ಹೇಳಿದ. ಅವರು ಹೇಳಿದ ಕಾರಣ ಸುಮ್ಮನೆ ಬೈಅತ್ ಮಾಡಿದ. ಮನಸ್ಸಾರೆ ಬೈಅತ್ ಮಾಡಿರಲಿಲ್ಲ. ಆದರೆ, ಅನಂತರ ಅವರು ನೈಜ ಮುಸ್ಲಿಮರಾದರು. ಹೇಗಿದ್ದರೂ ಬೈಅತ್ ಮಾಡಿದರು. ಅಬ್ಬಾಸ್ ರಝಿಯಲ್ಲಾಹು ಅನ್‌ಹು ಹೇಳಿದರು: ಈಗ ನಿನ್ನ ಸಮುದಾಯಕ್ಕಾಗಿ ಆವಶ್ಯವುಳ್ಳದ್ದನ್ನು ಕೇಳು, ಇಲ್ಲದಿದ್ದರೆ ನಿನ್ನ ಸಮುದಾಯ ಸರ್ವನಾಶವಾಗುವುದು. ಆ ಸಂದರ್ಭದಲ್ಲಿ ಮುಹಾಜಿರರ ಹೃದಯ ಹೆದರಿಕೆಯಿಂದ ನಡುಗುತ್ತಿತ್ತು. ಅವರಂತು ಮಕ್ಕಾ ನಿವಾಸಿಗಳಾಗಿದ್ದರು. ಮಕ್ಕದ ಗೌರವ ಒಂದು ಬಾರಿ ಕೊನೆಗೊಂಡರೆ, ಅದರ ಬೆಲೆ ಮರಳಿ ಬರದು ಎಂದು ಭಾವಿಸುತ್ತಿದ್ದರು. ಅವರು ಅತಿಯಾದ ದೌರ್ಜನ್ಯಗಳನ್ನು ಸಹಿಸಿದ್ದರು ಕೂಡ ಹೇಗಾದರೂ ಮೈತ್ರಿ ಸಂಧಾನ ನಡೆಯಲಿ ಎಂದು ಪ್ರಾರ್ಥಿಸುತ್ತಿದ್ದರು. ಆದರೆ, ಅನ್ಸಾರ್‌ಗಳು ಇದಕ್ಕೆ ನೇರ ವಿರುದ್ಧವಾದ ಭಾವನೆಗಳನ್ನು ಹೊಂದಿದ್ದರು. ಅವರು ಬಹಳ ಆವೇಶದಿಂದ ಇದ್ದರು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೂ ಸೂಫ್‌ಯಾನ್‌ರೊಡನೆ ತನ್ನ ಬೇಡಿಕೆ ಇರಿಸಲು ಹೇಳಿದರು. ಅಬೂಸುಫ್‌ಯಾನ್ ಹೇಳಿದರು: ಯಾ ರಸೂಲುಲ್ಲಾಹ್, ನೀವು ನಿಮ್ಮ ಸಮುದಾಯದ ಮೇಲೆ ದಯೆ ತೋರಿಸುವುದಿಲ್ಲವೇ? ನೀವಂತು ಅತ್ಯಂತ ದಯಾಳು ಮತ್ತು ಕೃಪಾಳು ಆಗಿರುವಿರಿ. ಅದಲ್ಲದೆ, ನಾನು ನಿಮ್ಮ ಸಂಬಂಧಿಕ, ನಿಮ್ಮ ಸಹೋದರನಾಗಿದ್ದೇನೆ. ನನಗೂ ಸ್ವಲ್ಪ ಗೌರವ ಸಿಗಬೇಕು. ನಾನೀಗ ಮುಸ್ಲಿಮನೂ ಆಗಿದ್ದೇನೆ. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸರಿ, ಯಾರು ಅಬೂಸುಫ್‌ಯಾನಿನ ಮನೆಯೊಳಗೆ ಪ್ರವೇಶಿಸುವರೋ ಅವರಿಗೆ ಆಶ್ರಯ ನೀಡಲಾಗುವುದು ಎಂದು ನೀನು ಪ್ರಖ್ಯಾಪಿಸು. ಅಬೂಸುಫ್‌ಯಾನ್ ಹೇಳಿದ: ಯಾ ರಸೂಲುಲ್ಲಾಹ್, ನನ್ನ ಮನೆಯಾದರೋ ಚಿಕ್ಕದು. ಅದರಲ್ಲಿ ಎಷ್ಟು ಜನರು ಪ್ರವೇಶಿಸುವುದು? ಇಷ್ಟು ದೊಡ್ಡ ಪಟ್ಟಣದ ಎಲ್ಲ ಜನರಿಗೆ ನನ್ನ ಮನೆ ಹೇಗೆ ಸಾಕಾಗುವುದು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸರಿ, ಯಾರು ಕಅ್‌ಬ ಮಂದಿರದ ಒಳಗೆ ಹೋಗುತ್ತಾರೋ, ಅವರಿಗೆ ಆಶ್ರಯ ನೀಡಲಾಗುವುದು. ಅಬೂಸೂಫ್‌ಯಾನ್ ಹೇಳಿದ: ಯಾ ರಸೂಲುಲ್ಲಾಹ್, ಆಗಲೂ ಜನರು ಬಾಕಿಯಾಗುವರು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಯಾರು ತಮ್ಮ ಆಯುಧಗಳನ್ನು ಕೆಳಗೆ ಹಾಕುತ್ತಾರೋ, ಅವರನ್ನು ಸಹ ಏನೂ ಮಾಡಲಿಕ್ಕಿಲ್ಲ. ಅಬೂಸೂಫ್‌ಯಾನ್ ಹೇಳಿದ: ಯಾ ರಸೂಲುಲ್ಲಾಹ್, ಆಗಲೂ ಜನರು ಬಾಕಿಯಾಗುವರು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯಾರು ತಮ್ಮ ಮನೆಗಳ ಒಳಗೆ ಹೋಗಿ ಬಾಗಿಲು ಮುಚ್ಚುತ್ತಾರೋ ಅವರಿಗೂ ಆಶ್ರಯ ನೀಡಲಾಗುವುದು. ಅಬೂಸೂಫ್‌ಯಾನ್ ಹೇಳಿದ: ಗಲ್ಲಿಗಳಲ್ಲಿ ಇರುವ ಜನರು ಬಾಕಿಯಾಗುವರು. ಆ ಬಡಪಾಯಿ ಜನರು ಕೊಲ್ಲಲ್ಪಡುವರು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಸರಿ, ಬಿಲಾಲಿನಹೆಸರಲ್ಲಿ ಒಂದು ಬಾವುಟವನ್ನು ತಯಾರು ಮಾಡಿರಿ. ಹರ್ಝ್‌ರತ್ ಅಬೀ ರುವೈಹ ಎಂಬ ಹೆಸರಿನ ಸಹಾಬಿಯೊರ್ವರು ಅಲ್ಲಿದ್ದರು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಲ್ಲಿ ಮುಹಾಜಿರ್‌ಗಳನ್ನು ಮತ್ತು ಅನ್ಸಾರುಗಳನ್ನು ಪರಸ್ಪರ ಸಹೋದರರನ್ನಾಗಿ ಮಾಡಿದಾಗ, ಅಬೂ ರುವೈಹ ರಝಿಯಲ್ಲಾಹು ಅನ್‌ಹುರನ್ನು ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಸಹೋದರರನ್ನಾಗಿ ಮಾಡಿದ್ದರು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಹೆಸರಲ್ಲಿ ಮಾಡಿದ ಧ್ವಜವನ್ನು ಹರ್ಝ್‌ರತ್ ಅಬೂ ರುವೈಹ ರಝಿಯಲ್ಲಾಹು ಅನ್‌ಹುರಿಗೆ ಕೊಟ್ಟು ಬೀದಿ ನಡುವೆ ನಿಂತು ಹೀಗೆ ಘೋಷಿಸಲು ಹೇಳಿದರು: ಯಾರು ಬಿಲಾಲ್‌ರ ಧ್ವಜದ ಕೆಳಗೆ ಬರುತ್ತಾರೋ ಅವರನ್ನು ಸುಮ್ಮನೆ ಬಿಟ್ಟುಬಿಡಲಾಗುವುದು. ಬಹುಶಃ ಆಗ ಹರ್ಝ್‌ರತ್ ಬಿಲಾಲ್ ಸಮೀಪದಲ್ಲಿ ಇರಲಿಲ್ಲ ಅಥವಾ ಬೇರೆ ಯಾವುದೇ ಕಾರಣದಿಂದ ಧ್ವಜವನ್ನು ಅಬೂ ರುವೈಹರಿಗೆ ಕೊಡಲಾಗಿತ್ತು ಎಂದು ತೋರುತ್ತದೆ. ಆಗ ಅಬೂ ಸುಫ್ಯಾನ್ ಹೇಳಿದ: ಸಾಕು, ಈ ಮಕ್ಕದ ಜನರು ಸುರಕ್ಷಿತರಾಗುವರು. ಈಗ ನನಗೆ ಹೋಗಲು ಅನುಮತಿಕೊಡಿರಿ. 'ಹೋಗು' ಎಂದು ಹೇಳಿ ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅನುಮತಿಕೊಟ್ಟರು. ಈಗ ಸರದಾರ ಸ್ವತಃ ಅಸ್ತ್ರಗಳನ್ನು ಕೆಳಗೆ ಹಾಕಿದ್ದರು. ಆದ್ದರಿಂದ ಬೇರೆಯವರೊಡನೆ ತಮ್ಮ ತಮ್ಮ ಆಯುಧಗಳನ್ನು ಕೆಳಗೆ ಹಾಕಲು ಹೇಳುವುದರ ಅಥವಾ ಹೇಳದಿರುವುದರ ಪ್ರಶ್ನೆ ಅಲ್ಲಿ ಉದಿಸುತ್ತಿರಲಿಲ್ಲ. ಭಯದಿಂದ ಅಬೂಸುಫ್‌ಯಾನ್ ಮಕ್ಕ ಪ್ರವೇಶಿಸಿ ಹೀಗೆ ಹೇಳುತ್ತಾ ಹೋಗುತ್ತಿದ್ದ: ಜನರೇ, ತಮ್ಮ ತಮ್ಮ ಮನೆಗಳ ಬಾಗಿಲುಗಳನ್ನು ಮುಚ್ಚಿರಿ. ಜನರೇ, ತಮ್ಮ ತಮ್ಮ ಆಯುಧಗಳನ್ನು ಕೆಳಗ ಹಾಕಿರಿ. ಜನರೇ, ಕಅ್‌ಬದ ಒಳಗೆ ಹೋಗಿರಿ, ಜನರೇ, ಬಿಲಾಲಿನ ಧ್ವಜವನ್ನು ನಾಟಲಾಗಿದೆ. ಅದರ ಅಡಿಯಲ್ಲಿ ಹೋಗಿ ನಿಲ್ಲಿರಿ. ಅಷ್ಟರಲ್ಲಿ, ಜನರು ತಮ್ಮ ತಮ್ಮ ಮನೆಗಳ ಬಾಗಿಲುಗಳನ್ನು ಮುಚ್ಚಲು ಶುರುಮಾಡಿದರು. ಕೆಲವರು ಕಅ್‌ಬ ಮಂದಿರಕ್ಕೆ ಪ್ರವೇಶಿಸಿದರು. ಜನರು ಹೊರಗೆ ಬಂದು ತಮ್ಮ ತಮ್ಮ ಅಸ್ತ್ರಗಳನ್ನು ಬಿಸಾಕಲು ಶುರುಮಾಡಿದರು. ಅಷ್ಟರಲ್ಲಿ ಇಸ್ಲಾಮಿಕ ಸೈನ್ಯ ಪಟ್ಟಣವನ್ನು ಪ್ರವೇಶಿಸಿತು. ಜನರು ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಬಾವುಟದ ಕೆಳಗೆ ಒಟ್ಟುಗೂಡಿದರು. ಈ ಘಟನೆಯಲ್ಲಿ ಮಹತ್ತಾದ ಸಂಗತಿ ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರಧ್ವಜವಾಗಿತ್ತು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹರ್ಝ್‌ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಹೆಸರಲ್ಲಿ ಬಾವುಟವನ್ನು ತಯಾರಿಸಿ, ಯಾರು ಬಿಲಾಲ್‌ರ ಧ್ವಜದ ಅಡಿಯಲ್ಲಿ ನಿಲ್ಲುತ್ತಾರೋ ಅವರಿಗೆ ಆಶ್ರಯ ನೀಡಲಾಗುವುದು ಎಂದು ಹೇಳುತ್ತಾರೆ. ಸತ್ಯದಲ್ಲಿ ಅಲ್ಲಿ ಸರದಾರ ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಿದ್ದರು. ಆದರೆ, ಅವರ ಯಾವುದೇ ಧ್ವಜವನ್ನು ನಾಟಿರಲಿಲ್ಲ. ಅವರ ನಂತರ ತ್ಯಾಗಗಳನ್ನು ಮಾಡಿದ್ದವರು ಹರ್ಝ್‌ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಆಗಿದ್ದರು. ಆದರೆ, ಅವರ ಯಾವುದೇ ಧ್ವಜವನ್ನು ನಾಟಿರಲಿಲ್ಲ. ಅವರ ನಂತರ ಮುಸ್ಲಿಮಾದ ಸರದಾರ ಹರ್ಝ್‌ರತ್ ಉಮರ್ ರಝಿಯಲ್ಲಾಹು ಅನ್‌ಹು ಆಗಿದ್ದರು. ಆದರೆ ಅವರ ಹೆಸರಲ್ಲಿ ಯಾವುದೇ ಬಾವುಟನ್ನು ನಾಟಿರಲಿಲ್ಲ. ಅವರ ನಂತರ ಹರ್ಝ್‌ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಆಗಿದ್ದರು.ಅವರು ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಳಿಯರಾಗಿದ್ದರು. ಆದರೆ ಅವರ ಹೆಸರಲ್ಲಿ ಯಾವುದೇ ಧ್ವಜವನ್ನು ನಾಟಿರಲಿಲ್ಲ. ಅವರ ನಂತರ ಹರ್ಝ್‌ರತ್ ಅಲಿ ರಝಿಯಲ್ಲಾಹು ಅನ್‌ಹು ಆಗಿದ್ದರು. ಅವರು ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹೋದರ ಮತ್ತು ಅಳಿಯರಾಗಿದ್ದರು. ಅವರ ಹೆಸರಲ್ಲೂ ಯಾವುದೇ ಧ್ವಜವನ್ನು

ನಿಲ್ಲಿಸಲಾಗಿರಲಿಲ್ಲ. ಅವರ ನಂತರ ಅಬ್ದುರ್ರಹ್ಮಾನ್ ಬಿನ್ ಔಫ್ ರಝಿಯಲ್ಲಾಹು ಅನ್‌ಹು ಇದ್ದರು. ಅಬ್ದುರ್ರಹ್ಮಾನ್ ಬಿನ್ ಔಫ್ ರಝಿಯಲ್ಲಾಹು ಅನ್‌ಹು ಜೀವಂತವಿರುವ ವರೆಗೆ ಮುಸ್ಲಿಮರಲ್ಲಿ ಬಿರುಕು ಉಂಟಾಗದು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದರು. ಹೀಗಿದ್ದರೂ ಅವರ ಹೆಸರಲ್ಲಿ ಯಾವುದೇ ಬಾವುಟವನ್ನು ನಾಟಿರಲಿಲ್ಲ. ಅನಂತರ ಅಬ್ಬಾಸ್ ರಝಿಯಲ್ಲಾಹು ಅನ್‌ಹು ಅವರ ಚಿಕ್ಕಪ್ಪರಾಗಿದ್ದರು. ಅವರು ಕೆಲವು ಬಾರಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನವನ್ನು ಲಕ್ಷಿಸದೇ ಸಲೀಸಾಗಿ ಮಾತನಾಡುವವರೂ ಆಗಿದ್ದರು. ಅವರ ಮಾತುಗಳಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎಂದೂ ಕೋಪಗೊಳ್ಳುತ್ತಿರಲಿಲ್ಲ. ಆದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಹೆಸರಲ್ಲಿ ಬಾವುಟವನ್ನು ತಯಾರಿಸಿರಲಿಲ್ಲ. ಅದೇ ರೀತಿಯಲ್ಲಿ ಅನೇಕ ಸರದಾರರು ಮತ್ತು ಮಹಾವ್ಯಕ್ತಿಗಳು ಅಲ್ಲಿದ್ದರು. ಸರದಾರನ ಮಗನೂ ಸ್ವತಃ ಪ್ರಸಿದ್ಧ ವ್ಯಕಿಯೂ ಆಗಿದ್ದ ಖಾಲಿದ್ ಬಿನ್ ವಲೀದ್ ರಝಿಯಲ್ಲಾಹು ಅನ್‌ಹು ಅಲ್ಲಿದ್ದರು. ಸರದಾರನ ಮಗನಾಗಿದ್ದ ಅಮ್ರ್ ಬಿನ್ ಆಸ್ ರಝಿಯಲ್ಲಾಹು ಅನ್‌ಹು ಅಲ್ಲಿದ್ದರು. ಅದೇ ರೀತಿಯಲ್ಲಿ ಹೆಸರುವಾಸಿಯಾಗಿದ್ದ ಅನೇಕ ಸರದಾರರ ಮಕ್ಕಳು ಅಲ್ಲಿದ್ದರು. ಆದರೆ, ಅವರಲ್ಲಿ ಯಾರ ಹೆಸರಲ್ಲೂ ಧ್ವಜವನ್ನು ತಯಾರಿಸಿರಲಿಲ್ಲ. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಹೆಸರಲ್ಲಿ ಮಾತ್ರವೇ ಧ್ವಜವನ್ನು ತಯಾರಿಸಲಾಗಿತ್ತು. ಇದು ಏಕೆ? ಇದಕ್ಕೆ ಕಾರಣವೇನೆಂದರೆ, ಮಕ್ಕಾ ವಿಜಯದಂದು ಕೊಲ್ಲಲ್ಪಡಲು ವಿಧಿಸಲ್ಪಟ್ಟವರು ತಮ್ಮ ಸಹೋದರರು ಮತ್ತು ಸಂಬಂಧಿಕರೇ ಆಗಿರುವರೆಂದು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ನೋಡುತ್ತಿದ್ದರು. ಮಾತ್ರವಲ್ಲ, ಅವರ ಮೇಲೆ ನಡೆದ ದೌರ್ಜನ್ಯಗಳನ್ನು ಮರೆತುಕೊಂಡು ಅವರು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹೀಗೆ ಕೇಳುತ್ತಿದ್ದರು: ನಮ್ಮ ಸಹೋದರರನ್ನು ನಾವು ಈಗ ಕೊಲ್ಲಬೇಕಾಗುವುದೇ? ಉಮರ್ ರಝಿಯಲ್ಲಾಹು ಅನ್‌ಹು ಸಹ ಸತ್ಯನಿಷೇಧಿಗಳನ್ನು ಕೊಲ್ಲಲ್ಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹೇಳುತ್ತಿದ್ದರೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಕ್ಷಮಿಸಲು ತಯಾರಾದಾಗ, ಅವರು ಮನಸ್ಸಲ್ಲಿ ಹೀಗೆ ಹೇಳುತ್ತಿರಬಹುದು: ಹೇಗಿದ್ದರೂ ನಮ್ಮ ಸಹೋದರರನ್ನು ಕ್ಷಮಿಸಿದ್ದು ಒಳ್ಳೆಯದೇ ಆಯಿತು. ನಮ್ಮ ಮೇಲೆ ಅವರು ಕಠಿಣವಾಗಿ ವರ್ತಿಸಿದರೆ ಏನಾಯಿತು. ಅದೇ ರೀತಿಯಲ್ಲಿ ಹೇಗಿದ್ದರೂ ಕ್ಷಮಿಸಲ್ಪಟ್ಟದ್ದು ನಮ್ಮ ಸಹೋದರರೇ ಅಲ್ಲವೇ? ಎಂದೇ ಹಝ್ರತ್ ಉಸ್ಮಾನ್ ರಝಿಯಲ್ಲಾಹು ಮತ್ತು ಅಲಿ ರಝಿಯಲ್ಲಾಹು ಅನ್‌ಹುಸಹ ಯೋಚಿಸಿರಬಹುದು. ಸ್ವತಃ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಕ್ಷಮಿಸುವಾಗ, ಕ್ಷಮಿಸಿದ್ದು ಒಳ್ಳೆಯದೇ ಆಯಿತು ಎಂದೇ ಭಾವಿಸಿರಬಹುದು. ಏಕೆಂದರೆ, ಕ್ಷಮಿಸಲ್ಪಡುವವರಲ್ಲಿ ಅವರ ತಂದೆಯ ಸಹೋದರರು, ಅಳಿಯ, ಪ್ರಿಯ ಸಂಬಂಧಿಕರು ಸಹ ಒಳಪಟ್ಟಿದ್ದರು. ಕ್ಷಮಿಸುವುದರಿಂದ ತನ್ನ ಸಂಬಂಧಿಕರೇ ರಕ್ಷಣೆ ಪಡೆದರು ಎಂದು ಅವರು ಭಾವಿಸಿರಬಹುದು. ಕೇವಲ ಒಬ್ಬ ವ್ಯಕ್ತಿಗೆ ಮಕ್ಕಾದಲ್ಲಿ ಸಂಬಂಧಿಕರಾಗಿ ಯಾರೂ ಇರಲಿಲ್ಲ. ಅವರಿಗೆ ಮಕ್ಕದಲ್ಲಿ ಯಾವುದೇ ಶಕ್ತಿಯಿರಲಿಲ್ಲ. ಅವರಿಗೆ ಮಕ್ಕದಲ್ಲಿ ಸ್ನೇಹಿತರಾಗಿ ಯಾರೂ ಇರಲಿಲ್ಲ. ಅವರ ನಿಸ್ಸಹಾಯಕತೆಯ ಸ್ಥಿತಿಯಲ್ಲಿ ಅವರ ಮೇಲೆ ದೌರ್ಜನ್ಯ ಮಾಡಲಾಗಿತ್ತು. ಅಂತಹ ದೌರ್ಜನ್ಯ, ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಮೇಲೆ ಆಗಿರಲಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೂ ಅಂತಹ ದೌರ್ಜನ್ಯವಾಗಿರಲಿಲ್ಲ.

ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಸಂಬಂಧಿಕರ ಕಾರಣದಿಂದ ಸುರಕ್ಷಿತರಾಗಿದ್ದರು ಎಂದು ಒಂದು ವರದಿಯಲ್ಲಿ ಬಂದದ್ದನ್ನು ನಾನು ಕಳೆದ ವಾರದ ಖುತ್‌ಬದಲ್ಲಿ ಹೇಳಿದ್ದೆ. ಹಝ್ರತ್ ಬಿಲಾಲ್‌ರ ಮೇಲೆ ಮಾತ್ರವಲ್ಲ, ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಕೂಡ ದೌರ್ಜನ್ಯ ನಡೆದಿತ್ತು ಎಂದು ನಾನು ಅದರಲ್ಲಿ ವಿವರಿಸಿದ್ದೆ. ಇಲ್ಲಿಯೂ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ದೌರ್ಜನ್ಯ ನಡೆದಿಲ್ಲ ಎಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಿಲ್ಲ, ಬದಲಿಗೆ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಮೇಲೆ ನಡೆದಂತಹ ದೌರ್ಜನ್ಯ ಯಾರ ಮೇಲೂ ನಡೆದಿಲ್ಲ ಎಂದು ಹೇಳುತ್ತಿದ್ದಾರೆ. ಅನಂತರ ಆ ದೌರ್ಜನ್ಯವೇನಾಗಿತ್ತು ಎಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸುತ್ತಾರೆ. ಆ ದೌರ್ಜನ್ಯವೇನಾಗಿತ್ತೆಂದರೆ, ಅವರನ್ನು ಅತಿಬಿಸಿಯಾದ ಮರಳಿನ ಮೇಲೆ ಬರೀಮೈಯಲ್ಲಿ ಮಲಗಿಸಲಾಗುತ್ತಿತ್ತು. ಬಿಸಿಲುಗಾಲದಲ್ಲಿ ಪಾದರಕ್ಷೆಯಿಲ್ಲದೆ ನಮಗೆ ನಡೆಯಲೇ ಸಾಧ್ಯವಿಲ್ಲ. ಹೀಗಿರುವಾಗ ಅವರನ್ನು ಅತಿಬಿಸಿಯಾದ ಮರಳಿನ ಮೇಲೆ ಬರೀ ಮೈಯಲ್ಲಿ ಮಲಗಿಸಲಾಗುತ್ತಿತ್ತು. ಅನಂತರ ಆಣಿಯಿರುವ ಬೂಟುಗಳನ್ನು ಹಾಕಿ ಯುವಕರು ಅವರ ಎದೆಯ ಮೇಲೆ ಕುಣಿದಾಡುತ್ತಿದ್ದರು. ಅಲ್ಲಾಹನ ಹೊರತು ಬೇರೆ ದೇವರುಗಳು ಇದ್ದಾರೆ ಮತ್ತು ಮುಹಮ್ಮದ್ ರಸೂಲುಲ್ಲಾಹ್ ಸುಳ್ಳುವಾದಿ ಎಂದು ಹೇಳಲು ಒತ್ತಾಯಿಸುತ್ತಿದ್ದರು. ಅವರು ಬಹಳವಾಗಿ ಹೊಡೆಯುತ್ತಿದ್ದಾಗ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ತನ್ನ ಹಬ್‌ಶಿ ಶೈಲಿಯಲ್ಲಿ **ಅಸ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹ್; ಅಸ್‌ಹದು ಅನ್‌ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುತ್ತಿದ್ದರು. ನೀವು ನನ್ನ ಮೇಲೆ ಎಷ್ಟೇ ದೌರ್ಜನ್ಯ ಮಾಡಿದರೂ, ದೇವನು ಏಕನೆಂದು ನನಗೆ ಮನವರಿಕೆಯಾದ ಮೇಲೆ ದೇವರು ಒಂದಕ್ಕಿಂತ ಹೆಚ್ಚಿದ್ದಾರೆ ಎಂದು ನಾನು ಹೇಗೆ ಹೇಳಲಿ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸತ್ಯ ಪ್ರವಾದಿಯಾಗಿರುವರು ಎಂದು ನನಗೆ ಗೊತ್ತಿರುವಾಗ, ನಾನು ಅವರು ಸುಳ್ಳುವಾದಿಯೆಂದು ಹೇಗೆ ಹೇಳಲಿ. ಹೀಗೆ ಹೇಳುವಾಗ ಅವರನ್ನು ಜನರು ಇನ್ನೂ ಹೆಚ್ಚಾಗಿ ಹೊಡೆಯಲು ಶುರುಮಾಡುತ್ತಿದ್ದರು. ಬೇಸಿಗೆಕಾಲದಲ್ಲಿ ಅವರೊಂದಿಗೆ ಹೀಗೆ ವರ್ತಿಸಲಾಗುತ್ತಿತ್ತು. ಚಳಿಗಾಲದಲ್ಲಿ ಅವರ ಕಾಲುಗಳಿಗೆ ಹಗ್ಗವನ್ನು ಕಟ್ಟಿ, ಅವರನ್ನು ಮಕ್ಕದ ಕಲ್ಲಿನ ಗಲ್ಲಿಗಳಲ್ಲಿ ಎಳೆದುಕೊಂಡು ಹೋಗುತ್ತಿದ್ದರು. ಅದರಿಂದ ಅವರ ಚರ್ಮ ಸುಳಿಯಲ್ಪಟ್ಟು ಗಾಯವಾಗುತ್ತಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುಳ್ಳುವಾದಿಯಾಗಿರುವರು ಮತ್ತು ಅಲ್ಲಾಹನ ಹೊರತು ಬೇರೆ ಆರಾಧ್ಯರು ಇರುವರು ಎಂದು ಹೇಳಲು ಅವರನ್ನು ಜನರು ಒತ್ತಾಯಿಸುತ್ತಿದ್ದರು. ಆಗಲೂ ಹಝ್ರತ್ ಬಿಲಾಲ್ ರಝಿಯಲ್ಲಾಹು **ಅನ್‌ಹು ಅಸ್‌ಹದು ಅನ್‌ಲಾ ಇಲಾಹ ಇಲ್ಲಲ್ಲಾಹು, ಅಸ್‌ಹದು ಅನ್‌ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುತ್ತಿದ್ದರು.

ಹತ್ತು ಸಾವಿರದ ಸಂಖ್ಯೆಯಲ್ಲಿ ಇಸ್ಲಾಮಿನ ಸೈನ್ಯ ಮಕ್ಕ ಪಟ್ಟಣವನ್ನು ಪ್ರವೇಶಿಸುತ್ತಿರುವಾಗ, ಇಂದು ನನ್ನ ಮೇಲೆ ಕುಣಿದಾಡಿದ ಬೂಟುಗಳ ಪ್ರತಿಕಾರವನ್ನು ತೀರಿಸಲಾಗುವುದು, ದೌರ್ಜನ್ಯದಿಂದ ನನ್ನನ್ನು ಹೊಡೆದುವುದರ ಪರಿಹಾರವನ್ನು ನನಗೆ ನೀಡಲಾಗುವುದು ಎಂದು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಯೋಚಿಸಿರಬಹುದು. ಆದರೆ, ಯಾರು ಅಬೂಸುಫ್‌ಯಾನ್‌ರ ಮನೆಯೊಳಗೆ ಪ್ರವೇಶಿಸುತ್ತಾರೋ ಅವರನ್ನು ಕ್ಷಮಿಸಲಾಗುವುದು, ಕಅ್‌ಬ ಮಂದಿರದೊಳಗೆ ಪ್ರವೇಶಿಸುವವರನ್ನು ಕ್ಷಮಿಸಲಾಗುವುದು, ತಮ್ಮ ತಮ್ಮ ಆಯುಧಗಳನ್ನು ಬಿಸಾಡುವವರರನ್ನು ಕ್ಷಮಿಸಲಾಗುವುದು, ತಮ್ಮ ತಮ್ಮ ಮನೆಯೊಳಗೆ ಪ್ರವೇಶಿಸುವವರನ್ನು ಕ್ಷಮಿಸಲಾಗುವುದು ಎಂದೆಲ್ಲ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಿದ್ದಾಗ, ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಯೋಚಿಸಿರಬಹುದು. ಇವರಂತು ತಮ್ಮ ಎಲ್ಲ ಸಹೋದರರನ್ನು ಕ್ಷಮಿಸುತ್ತಿದ್ದಾರೆ, ಒಳ್ಳೆಯದನ್ನೇ ಮಾಡುತ್ತಿರುವರಾದರೂ ನನ್ನ ಪ್ರತಿಕಾರ ಬಾಕಿಯುಳಿಯಿತಲ್ಲವೇ? ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೂ ಇದು ತಿಳಿದಿತ್ತು. ಕ್ಷಮಿಸುವುದರಿಂದ ದುಃಖವನ್ನು ಅನುಭವಿಸುತ್ತಿರುವ ಒಬ್ಬನೇ ವ್ಯಕ್ತಿ ಹಝ್ರತ್ ಬಿಲಾಲ್ ಆಗಿರುವರು ಎಂದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಕ್ಷಮಿಸಲ್ಪಡುವವರಲ್ಲಿ ಹಝ್ರತ್ ಬಿಲಾಲ್‌ರ ಸಹೋದರ ಮತ್ತು ಸಂಬಂಧಿಕರಾಗಿ ಯಾರೂ ಇರಲಿಲ್ಲ. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅನುಭವಿಸಿದಂತಹ ದೌರ್ಜನ್ಯವನ್ನು ಯಾರೂ ಅನುಭವಿಸಿರಲಿಲ್ಲ.

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಮೇಲೆ ನಡೆದ ದೌರ್ಜನ್ಯದ ಪ್ರತಿಕಾರ ಮಾಡಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೀರ್ಮಾನಿಸಿದ್ದರು. ಆ ಪ್ರತಿಕಾರ ಹೇಗೆಂದರೆ, ಅದರಿಂದ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರವಾದಿತ್ವದ ಮಹಿಮೆಗೆ ಯಾವುದೇ ಕೊರತೆ ಉಂಟಾಗದು ಮತ್ತು ಹಝ್ರತ್ ಬಿಲಾಲ್‌ರ ಮನಸ್ಸು ಸಹ ಸಂತೋಷಗೊಳ್ಳುವುದು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹಝ್ರತ್ ಬಿಲಾಲ್‌ರ ಹೆಸರಲ್ಲಿ ಒಂದು ಧ್ವಜವನ್ನು ನಾಟಿರಿ. ಹಝ್ರತ್ ಬಿಲಾಲ್‌ರ ಎದೆಯ ಮೇಲೆ ಬೂಟುಗಳನ್ನು ಹಾಕಿ ಕುಣಿದಾಡುತ್ತಿದ್ದ, ಕಾಲುಗಳಿಗೆ ಹಗ್ಗವನ್ನು ಕಟ್ಟಿ ಎಳೆಯುತ್ತಿದ್ದ, ಬಿಸಿಯಾದ ಮರಳಿನಲ್ಲಿ ಮಲಗಿಸುತ್ತಿದ್ದ ಮಕ್ಕದ ಸರದಾರರೊಡನೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ತಮ್ಮ ಮತ್ತು ತಮ್ಮ ಪತ್ನಿಯರ ಹಾಗೂ ಮಕ್ಕಳ ಜೀವವನ್ನು ಉಳಿಸಲು ನೀವು ಬಯಸುವರಾದರೆ, ಹಝ್ರತ್ ಬಿಲಾಲ್‌ರ ಧ್ವಜದ ಅಡಿಯಲ್ಲಿ ಒಟ್ಟುಸೇರಿರಿ.

ಲೋಕ ಸೃಷ್ಟಿಯಾದ ಅಂದಿನಿಂದ, ಮನುಷ್ಯನಿಗೆ ಅಧಿಕಾರ ಲಭಿಸಿದ ದಿನದಿಂದ, ಮನುಷ್ಯರು ಇತರ ಮನುಷ್ಯರ ಮೇಲೆ ಸೇಡು ತೀರಿಸಲು ಆರಂಭಿಸಿದ ಅಂದಿನಿಂದ ಇಂದಿನ ವರೆಗೆ ಇಂತಹ ಮಹತ್ತಾದ ಪ್ರತಿಕಾರ ಯಾವ ಮನುಷ್ಯನು

ಮಾಡಿರಲಿಲ್ಲ ಎಂದು ನಾನು ಭಾವಿಸುತ್ತೇನೆ. ಹಝ್ರತ್ ಬಿಲಾಲ್‌ರ ಧ್ವಜವನ್ನು ಕಅ್‌ಬದ ಮುಂದೆ ಇರುವ ಮೈದಾನದಲ್ಲಿ ನಾಟಲ್ಪಟ್ಟಾಗ, ಮುಹಮ್ಮದ್ ರಸೂಲುಲ್ಲಾಹ್ ಸುಳ್ಳುವಾದಿ ಎಂದು ಹೇಳಲು ಒತ್ತಾಯಿಸಿ ಹಝ್ರತ್ ಬಿಲಾಲ್‌ರನ್ನು ತಮ್ಮ ಕಾಲುಗಳಿಂದ ತುಳಿಯುತ್ತಿದ್ದ ಸರದಾರರು, ಈಗ ತಮ್ಮ ಜೀವವನ್ನು ರಕ್ಷಿಸಲು ತಮ್ಮ ಪತ್ನಿ ಮತ್ತು ಮಕ್ಕಳ ಕೈಗಳನ್ನು ಹಿಡಿದು, ಓಡುತ್ತಾ ಹಝ್ರತ್ ಬಿಲಾಲ್‌ರ ಧ್ವಜದ ಕೆಳಗೆ ಬರುತ್ತಿದ್ದರು. ಇದನ್ನು ನೋಡಿ ಹಝ್ರತ್ ಬಿಲಾಲ್‌ರ ಹೃದಯ ಮತ್ತು ಜೀವ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಾಗಿ ಪೂರ್ಣವಾಗಿ ಅರ್ಪಣವಾಗುತ್ತಿತ್ತು. ಈ ಶತ್ರುಗಳ ಮೇಲೆ ಸೇಡು ನಾನು ತೀರಿಸುವನೋ ಇಲ್ಲವೋ, ಪ್ರತಿಕಾರ ಮಾಡಲು ನನಗೆ ಸಾಧ್ಯವಿತ್ತೋ ಇಲ್ಲವೋ ಎಂದು ಗೊತ್ತೇ ಇರಲಿಲ್ಲ ಎಂದು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಭಾವಿಸಿರಬಹುದು. ಆದರೆ ಇಂದು ಪ್ರತಿಕಾರ ತೀರಿಸಲಾಯಿತು. ಒಂದು ಕಾಲದಲ್ಲಿ ಅವರ ಎದೆಯ ಮೇಲೆ ಬೂಟುಗಳು ಕುಣಿದಾಡುತ್ತಿತ್ತು. ಈಗ ಆ ಬೂಟುಗಳನ್ನು ಹಾಕಿರುವ ಸರದಾರರು, ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಪಾದರಕ್ಷೆಯ ಅಡಿಯಲ್ಲಿ ತಲೆತಗ್ಗಿಸಿ ನಿಂತಿದ್ದರು. ಈ ಪ್ರತಿಕಾರ ಹಝ್ರತ್ ಯೂಸುಫ್ ಅಲೈಹಿಸ್ಸಲಾಮ್ ಮಾಡಿದ ಪ್ರತಿಕಾರಕ್ಕಿಂತ ವೈಭವಶಾಲಿಯಾಗಿತ್ತು. ಏಕೆಂದರೆ ಯೂಸುಫ್ ಅಲೈಹಿಸ್ಸಲಾಂ ತಮ್ಮ ತಂದೆಯ ಪರವಾಗಿ ತಮ್ಮ ಸಹೋದರರನ್ನು ಕ್ಷಮಿಸಿದ್ದರು. ಆದರೆ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಚಿಕ್ಕಪ್ಪರನ್ನು ಮತ್ತು ಸಹೋದರರನ್ನು ಒಬ್ಬ ಗುಲಾಮರ ಪಾದರಕ್ಷೆಯ ಮುಖಾಂತರ ಕ್ಷಮಿಸುತ್ತಾರೆ. ಹಝ್ರತ್ ಯೂಸುಫ್ ಅಲೈಹಿಸ್ಸಲಾಮರ ಪ್ರತಿಕಾರ ಈ ಪ್ರತಿಕಾರದ ಮುಂದೆ ಏನೂ ಅಲ್ಲ. (ಸೇರೆ ರೂಹಾನಿ, ಅನ್ವಾರುಲ್ ಉಲೂಮ್, ಸಂಪುಟ–24, ಪುಟ–268–273)

ನಾನು ಈಗ ಹೇಳಿದ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು **ಸೇರೇ ರೂಹಾನಿ** ಎಂಬ ತಮ್ಮ ಗ್ರಂಥದಲ್ಲಿ ವಿವರಿಸಿದ್ದರು. ಇದನ್ನೇ **ದೀಬಾಚ ತಫ್‌ಸೀರುಲ್ ಖುರ್‌ಆನಿನಲ್ಲೂ** ಅವರು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಇದನ್ನು ನಾನು ಹೇಳಲು ಕಾರಣವೇನೆಂದರೆ, ಈ ಕಡೆ ಹೀಗೆ ಬರೆಯಲಾಗಿತ್ತು, ನೀವು ಬೇರೆ ರೀತಿಯಲ್ಲಿ ಹೇಳಿದ್ದೀರಿ ಎಂದೆಲ್ಲ ಹೇಳಿ ನನಗೆ ಕೆಲವರು ಪತ್ರಗಳನ್ನು ಬರೆಯುತ್ತಾರೆ. ಈ ಎರಡು ವಿವರಣೆಯಲ್ಲಿ ಸಂಕ್ಷೇಪ ಮತ್ತು ವಿಸ್ತಾರದ ಹೊರತು ಬೇರೇನೂ ವ್ಯತ್ಯಾಸವಿಲ್ಲ. ಕೆಲವು ಜನರು ನ್ಯೂನತೆಗಳನ್ನು ಹುಡುಕಿ ವ್ಯತ್ಯಾಸಗಳನ್ನು ವಿವರಿಸಲು ಶುರುಮಾಡುತ್ತಾರೆ.

ಹೇಗಿದ್ದರೂ ಎರಡೂ ಒಂದೇ ಸಂಗತಿಯಾಗಿದೆ. ಅಬೂಸುಫ್‌ಯಾನ್ ಕೇಳಿದರು: ಯಾ ರಸೂಲುಲ್ಲಾಹ್, ಮಕ್ಕದ ಜನರು ಖಡ್ಗಗಳನ್ನು ಎತ್ತದಿದ್ದರೆ, ಅವರು ಸುರಕ್ಷಿತರಾಗಿರುವರೇ? ಹೌದೆಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. ತಮ್ಮ ಮನೆಯೊಳಗೆ ಪ್ರವೇಶಿಸಿ ಬಾಗಿಲುಗಳನ್ನು ಮುಚ್ಚುವವರೂ ಸುರಕ್ಷಿತರಾಗಿರುವರು ಎಂದೂ ಅವರು ಹೇಳಿದರು. ಹಝ್ರತ್ ಅಬ್ಬಾಸ್ ಹೇಳಿದರು: ಯಾ ರಸೂಲುಲ್ಲಾಹ್, ಅಬೂ ಸೂಫ್‌ಯಾನ್ ದೊಡ್ಡಸ್ತಿಕೆಯನ್ನು ಇಷ್ಟಪಡುವ ವ್ಯಕ್ತಿಯಾಗಿದ್ದಾನೆ. ಅವರ ಗೌರವಕ್ಕಾಗಿಯೂ ಏನಾದರೂ ಮಾಡಬೇಕೆಂಬುವುದಾಗಿದೆ ಅವರ ಕೋರಿಕೆಯ ಉದ್ದೇಶ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸರಿ, ಯಾರು ಅಬೂಸುಫ್‌ಯಾನ್‌ರ ಮನೆಗೆ ಪ್ರವೇಶಿಸುತ್ತಾರೋ ಅವರಿಗೂ ಆಶ್ರಯ ನೀಡಲಾಗುವುದು. ಯಾರು ಕಅ್‌ಬ ಮಸೀದಿಗೆ ನುಗ್ಗುತ್ತಾರೋ ಅವರಿಗೂ ಆಶ್ರಯ ನೀಡಲಾಗುವುದು. ಯಾರು ತಮ್ಮ ಅಸ್ತ್ರಗಳನ್ನು ಕೆಳಗೆ ಹಾಕುತ್ತಾರೋ ಅವರಿಗೂ ಆಶ್ರಯ ನೀಡಲಾಗುವುದು. ಯಾರು ತಮ್ಮ ಬಾಗಿಲುಗಳನ್ನು ಮುಚ್ಚಿ ಮನೆಯೊಳಗೆ ಇರುತ್ತಾರೋ ಅವರಿಗೂ ಸುರಕ್ಷೆ ನೀಡಲಾಗುವುದು. ಯಾರು ಹಕೀಂ ಬಿನ್ ಹಝ್ಝಾಮ್‌ರ ಮನೆಗೆ ಹೋಗುತ್ತಾರೋ ಅವರಿಗೂ ಆಶ್ರಯ ನೀಡಲಾಗುವುದು.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೀ ರುವೈಹರನ್ನು ಹಬ್‌ಶಿ ಗುಲಾಮರಾದ ಹಝ್ರತ್ ಬಿಲಾಲ್‌ರ ಸಹೋದರರನ್ನಾಗಿ ಮಾಡಿದ್ದರು. ಅವರ ಬಗ್ಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾವೀಗ ಅಬೀ ರುವೈಹರಿಗೆ ಧ್ವಜವನ್ನು ಕೊಡುತ್ತೇವೆ. ಯಾರು ಅಬೀ ರುವೈಹರ ಧ್ವಜದ ಕೆಳಗೆ ಬಂದು ನಿಲ್ಲುತ್ತಾರೋ ಅವರನ್ನು ಸಹ ಏನೂ ಮಾಡಲಿಕ್ಕಿಲ್ಲ. ಯಾರು ಅಬೀ ರುವೈಹರ ಧ್ವಜದ ಕೆಳಗೆ ಬರುತ್ತಾರೋ ಅವರಿಗೆ ಸುರಕ್ಷೆ ದೊರಕುವುದು ಎಂದು ಘೋಷಿಸಲು ಹಝ್ರತ್ ಬಿಲಾಲ್‌ರನ್ನು ಆದೇಶಿಸಿದರು. ಈ ಆದೇಶದಲ್ಲಿ ಎಂತಹ ಸೂಕ್ಷ್ಮವಾದ ಯುಕ್ತಿಯಿತ್ತು! ಮಕ್ಕದ ಜನರು ಹಝ್ರತ್ ಬಿಲಾಲ್‌ರ ಕಾಲುಗಳಿಗೆ ಹಗ್ಗಕಟ್ಟಿ ಅವರನ್ನು ಗಲ್ಲಿಗಳಲ್ಲಿ ಎಳೆದುಕೊಂಡು ಹೋಗುತ್ತಿದ್ದರು. ಮಕ್ಕದ ಗಲ್ಲಿಗಳು ಮತ್ತು ಮಕ್ಕದ ಮೈದಾನ ಬಿಲಾಲ್‌ರಿಗೆ ಸುರಕ್ಷೆಯ ಸ್ಥಳವಾಗಿರಲಿಲ್ಲ. ಬದಲಿಗೆ ಕಠಿಣ ಶಿಕ್ಷೆ, ನಿಂದನೆ ಮತ್ತು ಅಪಹಾಸ್ಯದ ಸ್ಥಳವಾಗಿತ್ತು. ಬಿಲಾಲ್‌ರ ಹೃದಯ ಇಂದು ಪ್ರತೀಕಾರದ ಕಡೆಗೆ ಪದೇ ಪದೇ ವಾಲುತ್ತಿರಬಹುದು ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅನಿಸುತ್ತಿತ್ತು. ಈ ನಿಷ್ಠಾವಂತ ಸಹಚರನ ಪರವಾಗಿ ಸೇಡು ತೀರಿಸುವುದು ಸಹ ಅತ್ಯಂತ ಆವಶ್ಯಕವಾದ ಸಂಗತಿಯಾಗಿತ್ತು. ಆದರೆ ನಮ್ಮ ಪ್ರತಿಕಾರ ಇಸ್ಲಾಮಿನ ವೈಭವ ಮತ್ತು ಸ್ಥಾನಕ್ಕೆ ಹೊಂದಿಕೊಳ್ಳುವಂತದ್ದು ಆಗಿರಬೇಕಿತ್ತು. ಆದುದರಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಿಲಾಲ್ ಪರವಾಗಿ ಪ್ರತೀಕಾರವನ್ನು ಶತ್ರುಗಳ ತಲೆಗಳನ್ನು ಕಡಿಯುವ ಮೂಲಕ ಮಾಡಲಿಲ್ಲ. ಬದಲಿಗೆ, ಅವರ ಸಹೋದರನ ಕೈಯಲ್ಲಿ ಒಂದು ಧ್ವಜವನ್ನು ಕೊಟ್ಟು ನಿಲ್ಲಿಸಿದರು ಮತ್ತು ಬಿಲಾಲ್‌ರೊಡನೆ ಹೀಗೆ ಘೋಷಿಸಲು ಹೇಳಿದರು: ಯಾರು ನನ್ನ ಸಹೋದರನ ಧ್ವಜದ ಅಡಿಯಲ್ಲಿ ಬಂದು ನಿಲ್ಲುತ್ತಾರೋ ಅವರಿಗೆ ಸುರಕ್ಷೆ ಕೊಡಲಾಗುವುದು. ಇದು ಎಂತಹ ಭವ್ಯವಾದ ಪ್ರತೀಕಾರವಾಗಿತ್ತು. ಎಷ್ಟೊಂದು ಮನೋಹರವಾದ ಸೇಡು ತೀರಿಸುವಿಕೆಯಾಗಿತ್ತು. ಹೇ ಮಕ್ಕಾದ ಜನರೇ, ಬನ್ನಿರಿ, ನನ್ನ ಸಹೋದರನ ಬಾವುಟದ ಅಡಿಯಲ್ಲಿ ಬಂದು ನಿಲ್ಲಿರಿ, ನಿಮಗೆ ಸುರಕ್ಷೆ ನೀಡಲಾಗುವುದು ಎಂದು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಉಚ್ಚ ಸ್ವರದಲ್ಲಿ ಘೋಷಿಸುವಾಗ, ಅವರ ಹೃದಯದ ಪ್ರತೀಕಾರದ ಆವೇಶ ಸ್ವತಃ ತಣ್ಣಗಾಗುತ್ತಿದ್ದಿರಬಹುದು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನಗಾಗಿ ನಿರ್ದೇಶಿಸಿದ ಪ್ರತಿಕಾರದ ರೀತಿಗಿಂತ ವೈಭವಶಾಲಿ ಮತ್ತು ಸುಂದರವಾದ ಪ್ರತಿಕಾರ ನನಗೆ ಬೇರೆಯಿಲ್ಲ ಎಂದು ಅವರಿಗೆ ಅನುಭವವಾಗಿರಬಹುದು.
(ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–340–341)

ಅನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಹಝ್ರತ್ ಬಿಲಾಲ್‌ರ ಸಹನೆ ಮತ್ತು ಮಕ್ಕಾ ವಿಜಯದ ಸಮಯದಲ್ಲಿ ಅವರ ಸ್ಥಿತಿಯ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಬಿಲಾಲ್‌ರಿಗೆ ಕೊಡಲಾಗುತ್ತಿದ್ದ ಕಷ್ಟತೆಗಳು ಇದಾಗಿತ್ತು. ಮಕ್ಕದಲ್ಲಿ ಅವರಿಗೆ ಅನುಭವಿಸಬೇಕಾಗಿ ಬಂದ ಕಷ್ಟತೆಗಳ ಬಗ್ಗೆ ಹಿಂದೆ ಪ್ರಸ್ತಾಪಿಸಲಾಗಿದೆ. ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಮಕ್ಕದ ದೊಡ್ಡ ದೊಡ್ಡ ಸರದಾರರು ಹಬ್‌ಶಿ ಗುಲಾಮರಾದ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಎದೆಯ ಮೇಲೆ ಜಿಗಿಯುತ್ತಿದ್ದರು. ಅಂತಹ ಗುಲಾಮರಿಗೆ ಎಂತಹ ಗೌರವವನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೊಟ್ಟರು ಎಂದು ಗೊತ್ತಿದೆಯೇ? ಮಕ್ಕಾ ವಿಜಯದ ವೇಳೆ ಅವರ ಪರವಾಗಿ ಸತ್ಯನಿಷೇಧಿಗಳ ಮೇಲೆ ಹೇಗೆ ಸೇಡು ತೀರಿಸಲಾಯಿತು ಎಂದು ತಿಳಿದಿದ್ದೀರಾ? ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಿಲಾಲ್‌ರ ಕೈಯಲ್ಲಿ ಒಂದು ಧ್ವಜವನ್ನು ಕೊಟ್ಟು ಹೀಗೆ ಘೋಷಿಸಲು ಹೇಳಿದರು: ಹೇ ಮಕ್ಕದ ಸರದಾರರೇ, ನೀವು ಈಗ ನಿಮ್ಮ ಜೀವವನ್ನು ರಕ್ಷಿಸಲು ಬಯಸುವುದಾದರೆ, ಹಝ್ರತ್ ಬಿಲಾಲ್‌ರ ಧ್ವಜದ ಕೆಳಗೆ ಬನ್ನಿರಿ. ಯಾರ ಎದೆಯ ಮೇಲೆ ಮಕ್ಕದ ದೊಡ್ಡ ದೊಡ್ಡ ಸರದಾರರು ಕುಣಿದಾಡುತ್ತಿದ್ದರೋ ಅಂತಹ ಬಿಲಾಲ್‌ರ ಬಗ್ಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾರೆ: ಇಂದು ನಿಮ್ಮ ಜೀವಗಳು ಸುರಕ್ಷಿತವಾಗಬೇಕಾದರೆ, ಅದಕ್ಕಿರುವ ಮಾರ್ಗವೆಂದರೆ, ನೀವು ಬಿಲಾಲ್‌ರ ದಾಸ್ಯದಲ್ಲಿ ಬನ್ನಿರಿ. ಸತ್ಯದಲ್ಲಿ ಬಿಲಾಲ್ ಗುಲಾಮರಾಗಿದ್ದರು, ಅವರು ಯಜಮಾನರಾಗಿದ್ದರು. (ಆಯಿಂದ ವಹೀ ಖೌಮೆಂ ಇಝ್ಝತ್ ಪಾಏಂಗಿ ಜೋ ಮಾಲಿ ವ ಜಾನಿ ಖುರ್‌ಬಾನಿಯೋಂ ಮೇಂ ಹಿಸ್ಸ ಲೇಂಗಿ, ಸನ್ವಾರುಲ್ ಉಲೂಮ್, ಸಂಪುಟ–21, ಪುಟ–164)

ಒಟ್ಟಿನಲ್ಲಿ, ಎಲ್ಲ ಜಾಗದಲ್ಲಿ ಒಂದೇ ಸಂಗತಿಯನ್ನು ಅಲ್ಪ ಸ್ವಲ್ಪ ವ್ಯತ್ಯಾಸದೊಂದಿಗೆ ಹೇಳಲಾಗಿದೆಯಷ್ಟೆ. ಧ್ವಜವನ್ನು ಅವರ ಸಹೋದರರ ಕೈಗೆ ಕೊಟ್ಟರೂ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಒಟ್ಟಿಗೆ ಇದ್ದರು. ಬಿಲಾಲ್‌ರ ಹೆಸರಲ್ಲಿ ಧ್ವಜ ತಯಾರು ಮಾಡಿದ್ದರೆ ಆಗಲೂ ಮತ್ತು ಬಿಲಾಲ್‌ರ ಕೈಯಲ್ಲಿ ಧ್ವಜವನ್ನು ಕೊಟ್ಟರೂ ಎಲ್ಲದರ ಫಲಿತಾಂಶ ಒಂದೇ. ಘಟನೆ ಎಂಬ ರೀತಿಯಲ್ಲೂ ಅದರಿಂದ ಉದ್ದೇಶಿಸುವ ತಾತ್ಪರ್ಯ ಎಂಬ ರೀತಿಯಲ್ಲೂ ಸಂಗತಿ ಒಂದೇ ಆಗಿದೆ.

ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್ ವರದಿ ಮಾಡುತ್ತಾರೆ: ಈದ್ ದಿವಸ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಮುಂದೆ ಈಟಿಯನ್ನು ಹಿಡಿದುಕೊಂಡು ಒಬ್ಬ ವ್ಯಕ್ತಿ ಹೋಗುತ್ತಿದ್ದರು. ಸಾಮಾನ್ಯವಾಗಿ ಆ ಕೆಲಸವನ್ನು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಮಾಡುತ್ತಿದ್ದರು. ಮುಹಮ್ಮದ್ ಬಿನ್ ಉಮರ್ ವರದಿ ಮಾಡುತ್ತಾರೆ: ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಈಟಿಯನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ನಾಟುತ್ತಿದ್ದರು. ಆ ಕಾಲದಲ್ಲಿ ಈದ್‌ಗಾಹ್ ಮೈದಾನವಿರುತ್ತಿತ್ತು. ಒಂದು ತೆರೆದ ಮೈದಾನದಲ್ಲಿ ಈದ್ ನಮಾಝ್ ನಿರ್ವಹಿಸಲಾಗುತ್ತಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ

ಸಅದ್, ಭಾಗ–3, ಪುಟ–177, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಇತಿಯೋಪಿಯಾದ ನಜಾಶಿ ಅರಸನು ಮೂರು ಈಟಿಗಳನ್ನು ಕೊಡುಗೆಯಾಗಿ ಕಳುಹಿಸಿದ್ದರು. ಅದರಲ್ಲಿ ಒಂದನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಬಳಿ ಇಟ್ಟರು. ಒಂದನ್ನು ಹಝ್ರತ್ ಅಲಿ ಬಿನ್ ಅಬೂ ತಾಲಿಬ್‌ರಿಗೆ ನೀಡಿದರು ಮತ್ತು ಒಂದನ್ನು ಹಝ್ರತ್ ಉಮರ್ ಬಿನ್ ಖತಾಬ್ ರಝಿಯಲ್ಲಾಹು ಅನ್‌ಹುರಿಗೆ ನೀಡಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನಗಾಗಿ ಇಟ್ಟಿದ್ದ ಈಟಿಯನ್ನು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹಿಡಿದುಕೊಂಡು ಈದ್ ದಿವಸಗಳಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಮುಂದೆ ನಡೆಯುತ್ತಿದ್ದರು. ಅನಂತರ ಅದನ್ನು ಅವರ ಮುಂದೆ ನಾಟುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈಟಿ ನಾಟಲ್ಪಟ್ಟ ದಿಕ್ಕಿಗೆ ನೋಡಿ ನಮಾಝ್ ನಿರ್ವಹಿಸುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಇದೇ ರೀತಿಯಲ್ಲಿ ಈಟಿಯನ್ನು ಹಿಡಿದುಕೊಂಡು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಮುಂದೆ ಮುಂದೆ ನಡೆಯುತ್ತಿದ್ದರು. (ಅತ್ತಬಖಾರುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–177, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಜಿಹಾದಿನಲ್ಲಿ ಭಾಗವಹಿಸಲು ಸಿರಿಯಗೆ ಹೋಗಿದ್ದರು ಎಂದು ವರದಿಯಲ್ಲಿ ಬಂದಿದೆ. ವರದಿ ಹೀಗಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಸನ್ನಿಧಿಗೆ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಬಂದು ಹೀಗೆ ಹೇಳಿದರು: ಹೇ ಖಲೀಫತುರ್ರಸೂಲ್, ಸತ್ಯವಿಶ್ವಾಸಿಯ ಅತ್ಯಂತ ಶ್ರೇಷ್ಠ ಕರ್ಮ ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡುವುದಾಗಿದೆ ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದನ್ನು ನಾನು ಕೇಳಿದ್ದೇನೆ. ಬಿಲಾಲ್ ನೀನು ಏನನ್ನು ಬಯಸುತ್ತಿದ್ದಿಯಾ ಎಂದು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಅವರೊಡನೆ ಕೇಳಿದರು. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಶಹೀದ್ ಆಗುವಂತಾಗಲು ನನ್ನನ್ನು ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಲು ಕಳುಹಿಸಬೇಕೆಂದು ನಾನು ಬಯಸುತ್ತೇನೆ. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಅಲ್ಲಾಹನ ಹೆಸರಲ್ಲಿ ಹೇಳುತ್ತೇನೆ. ತನ್ನ ಅಂತಸ್ಸು ಮತ್ತು ಹಕ್ಕನ್ನು ನೆನಪಿಸಿ ಹೇಳುತ್ತೇನೆ. ನಾನು ವೃದ್ಧ ಮತ್ತು ದುರ್ಬಲನಾಗಿದ್ದೇನೆ, ನನ್ನ ಮರಣದ ಸಮಯ ಸಮೀಪವಾಗುತ್ತಿದೆ. ಆದ್ದರಿಂದ ನೀನು ನನ್ನ ಬಳಿ ಇರು. ಹೀಗೆ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ನಿಧನದ ತನಕ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅವರ ಬಳಿಯೇ ಇದ್ದರು. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ನಿಧನನ ನಂತರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಬಳಿಗೆ ಬಂದು ಅದೇ ಮಾತನ್ನು ಹೇಳಿದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಸಹ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ನೀಡಿದಂತಹ ಉತ್ತರವನ್ನೇ ಕೊಟ್ಟರು. ಆದರೆ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅದನ್ನು ಸಮ್ಮತಿಸಲಿಲ್ಲ. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಜಿಹಾದಿಗೆ ಹೋಗುವುದಾಗಿ ಒತ್ತಾಯದಿಂದ ಹೇಳುತ್ತಿದ್ದರು. ಅವರು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಮುಂದೆ ಇದೇ ಆಗ್ರಹವನ್ನು ಇರಿಸಿದ್ದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಕೇಳಿದರು: ನೀನು ಹೋದ ನಂತರ ಅಧಾನ್ ನೀಡುವ ಜವಾಬ್ದಾರಿಯನ್ನು ಯಾರಿಗೆ ಒಪ್ಪಿಸಲಿ? ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹೇಳಿದರು: ಹಝ್ರತ್ ಸಅದ್‌ರಿಗೆ ಒಪ್ಪಿಸಿರಿ. ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಅಧಾನ್ ನೀಡಿದ್ದರು. ಹೀಗೆ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಅಧಾನ್ ಕೊಡುವ ಜವಾಬ್ದಾರಿಯನ್ನು ಹಝ್ರತ್ ಸಅದ್‌ರಿಗೆ ಒಪ್ಪಿಸಿದರು. ಅವರ ನಂತರ ಅವರ ಮಕ್ಕಳಿಗೆ ಈ ಕರ್ತವ್ಯವನ್ನು ಒಪ್ಪಿಸಿಕೊಟ್ಟರು. ಹಝ್ರತ್ ಬಿಲಾಲ್‌ರನ್ನು ಅವರ ಒತ್ತಾಯ ಮತ್ತು ಆಗ್ರಹದ ಕಾರಣ ಜಿಹಾದ್ ಮಾಡಲು ಕಳುಹಿಸಲಾಯಿತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–178, ದಅರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್, 2017)

ಇದೊಂದು ವರದಿಯಾಗಿದೆ. ಇದಲ್ಲದೆ ಬೇರೊಂದು ವರದಿಯಲ್ಲಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ನಡುವೆ ನಡೆದ ಮಾತುಕತೆ ಹೀಗೆ ಬಂದಿದೆ. ಮೂಸಾ ಬಿನ್ ಮುಹಮ್ಮದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನರಾದ ದಿನ, ಅವರನ್ನು ದಫನ್ ಮಾಡುವುದಕ್ಕೆ ಮುಂಚಿತವಾಗಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅಧಾನ್ ನೀಡಿದರು. ಅವರು **ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್** ಎಂದು ಹೇಳುತ್ತಿದ್ದಾಗ, ಎಂದರೆ ಅವರ ಶೈಲಿಯಲ್ಲಿ ಅಸ್‌ಹದು ಎಂದು ಹೇಳುತ್ತಿರುವಾಗ ಮಸೀದಿಯಲ್ಲಿರುವ ಜನರು ಬಿಕ್ಕಿ ಬಿಕ್ಕಿ ಅಳಲು ಶುರುಮಾಡಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೃತದೇಹವನ್ನು ದಫನ್ ಮಾಡಿದ ನಂತರ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರೊಡನೆ ಅಧಾನ್ ಕೊಡಲು ಹೇಳಿದಾಗ ಅವರು ಹೇಳಿದರು: ನಿಮ್ಮೊಂದಿಗೆ ಇರಲು ನೀವು ನನ್ನನ್ನು ಸ್ವತಂತ್ರಗೊಳಿಸಿದ್ದೀರಿ ಎಂದಾದರೆ, ನೀವು ಹೇಳಿದಂತೆ ಮಾಡುವುದಲ್ಲದೆ ನನಗೆ ಬೇರೆ ಮಾರ್ಗವಿಲ್ಲ. ಆದರೆ ನೀವು ನನ್ನನ್ನು ಅಲ್ಲಾಹನಿಗಾಗಿ ಸ್ವತಂತ್ರಗೊಳಿಸಿದ್ದೀರಿ ಎಂದಾದರೆ, ಆ ಅಲ್ಲಾಹನಿಗೋಸ್ಕರ ನನ್ನನ್ನು ಬಿಟ್ಟುಬಿಡಿರಿ. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ನಿಮ್ಮನ್ನು ಸ್ವತಂತ್ರಗೊಳಿಸಿದ್ದು ಅಲ್ಲಾಹನಿಗಾಗಿ ಆಗಿತ್ತು. ಆಗ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ ಬೇರೆ ಯಾರಿಗಾಗಿಯೂ ಅಧಾನ್ ನೀಡುವುದಿಲ್ಲ. ಆಗ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಅದಕ್ಕೆ ಉತ್ತರವಾಗಿ ಹೇಳಿದರು: ಅದು ನಿಮಗೆ ಬಿಟ್ಟದ್ದು ಮತ್ತು ನಿಮ್ಮಿಷ್ಟ. ಅದರ ನಂತರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಮದೀನದಲ್ಲೇ ಇದ್ದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲಿ ಸಿರಿಯಾ ಕಡೆಗೆ ಸೈನ್ಯವನ್ನು ಕಳುಹಿಸಲಾದಾಗ, ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಸಹ ಆ ಸೈನ್ಯದೊಂದಿಗೆ ಸಿರಿಯಾಗೆ ಹೋದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–178, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಅಸದುಲ್‌ಗ್ಾಬದ ಒಂದು ವರದಿಯಿದೆ: ಅದರ ಪ್ರಕಾರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳಿದರು: ನೀವು ನನ್ನನ್ನು ನಿಮಗಾಗಿ ಸ್ವತಂತ್ರಗೊಳಿಸಿದ್ದೀರಿ ಎಂದಾದರೆ, ನನ್ನನ್ನು ನಿಮ್ಮ ಬಳಿ ಇರಿಸಿರಿ. ಆದರೆ ನೀವು ನನ್ನನ್ನು ಅಲ್ಲಾಹನ ಮಾರ್ಗದಲ್ಲಿ ಸ್ವತಂತ್ರಗೊಳಿಸಿದ್ದೀರಿ ಎಂದಾದರೆ, ನನಗೆ ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಲು ಅನುಮತಿಕೊಡಿರಿ. ಸರಿ, ಹೋಗು ಎಂದು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹೇಳಿದರು. ಆಗ ಹಝ್ರತ್ ಬಿಲಾಲ್ ಸಿರಿಯಾಗೆ ಹೋಗಿ ಮರಣದ ತನಕ ಅಲ್ಲೇ ಇದ್ದರು. ಆದರೆ ಹೆಚ್ಚಿನ ವರದಿಗಳಲ್ಲಿ ಅವರು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಕಾಲದಲ್ಲಿ ಹೋಗಲಿಲ್ಲವೆಂದೂ, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದಲ್ಲಿ ಹೋಗಿದ್ದೆಂದೇ ಬಂದಿವೆ. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲೂ ಅಧಾನ್ ನೀಡುತ್ತಿದ್ದರು ಎಂದು ಕೆಲವು ವರದಿಗಳಿವೆ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–1, ಪುಟ–416, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಒಂದು ವರದಿ ಹೀಗೆ ಬಂದಿದೆ: ಒಂದು ಬಾರಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕನಸಲ್ಲಿ ಕಂಡರು. ಅವರು ಹೀಗೆ ಹೇಳಿದರು: ಹೇ ಬಿಲಾಲ್, ಇದೆಂತಹ ಕಲ್ಲು ಹೃದಯ ನಿನ್ನದು. ನನ್ನನ್ನು ಬಂದು ಝಿಯಾರತ್ ಮಾಡಲು ನಿನಗೆ ಸಮಯವಾಗಲಿಲ್ಲವೇ? ಹಝ್ರತ್ ಬಿಲಾಲ್ ಬಹಳ ದುಃಖದ ಸ್ಥಿತಿಯಲ್ಲಿ ನಿದ್ದೆಯಿಂದ ಎಚ್ಚೆತ್ತರು. ಸಿರಿಯಾದಲ್ಲಿದ್ದ ಅವರು ಸವಾರರಾಗಿ ಮದೀನಕ್ಕೆ ಬಂದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹೀತ ಖಬರ್‌ಮುಂದೆ ಹಾಜರಾಗಿ ನಡುಗುತ್ತಾ ಜೋರಾಗಿ ಅಳಲು ಶುರುಮಾಡಿದರು. ಅಷ್ಟರಲ್ಲಿ, ಹಝ್ರತ್ ಹಸನ್ ಮತ್ತು ಹುಸೈನ್ ಅವರ ಸಮೀಪ ಬಂದರು. ಹಝ್ರತ್ ಬಿಲಾಲ್ ಅವರನ್ನು ಚುಂಬಿಸಿ ಆಲಂಗಿಸಿಕೊಂಡರು. ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹು ಹೇಳಿದರು: ಬೆಳಿಗ್ಗಿನ ಅಧಾನ್ ನೀವು ಕೊಡಬೇಕೆಂದಾಗಿದೆ ನಮ್ಮ ಬಯಕೆ. ಅವರು ಮಸೀದಿಯ ಅಟ್ಟವನ್ನೇರಿ **ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್** ಎಂದು ಹೇಳಿದಾಗ, ಮದೀನದ ಜನರು ನಡುಗಿದರು. ಅನಂತರ ಅವರು **ಅಶ್‌ಹದು**

**ಅಲ್ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳಿದಾಗ ಜನರಲ್ಲಿ ಒಂದೇ ಸವನೆ ಚೇತರಿಕೆ ಉಂಟಾಯಿತು. ಅನಂತರ ಅವರು **ಅಶ್‌ಹದು ಅನ್ನ ಮುಹಮ್ಮದರ್‌ರಸೂಲುಲ್ಲಾಹ್** ಎಂದು ಹೇಳಿದಾಗ, ಸ್ತ್ರೀಯರು ತಮ್ಮ ಕೊಠಡಿಗಳಿಂದ ಹೊರಗೆ ಬಂದರು. ಸ್ತ್ರೀಯರು ಮತ್ತು ಪುರುಷರು ಅಷ್ಟು ಹೆಚ್ಚಾಗಿ ಅಳುವುದನ್ನು ಆ ದಿನದ ಹೊರತು ಬೇರೆಂದೂ ಕಂಡಿರಲಿಲ್ಲ ಎಂದು ವರದಿಗಾರ ಹೇಳುತ್ತಾರೆ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–1, ಪುಟ–471, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಜನರಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟ ಮತ್ತು ಅಂದಿನ ಅಝಾನ್ ನೆನಪಿಗೆ ಬಂದಿತ್ತು.

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲಘಟ್ಟದಲ್ಲಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಜಿಹಾದಿಗೆ ಹೋಗಲು ಅನುಮತಿ ಕೇಳಿದಾಗ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಕೇಳಿದರು: ನಿಮ್ಮನ್ನು ಅಝಾನ್ ನೀಡುವುದರಿಂದ ತಡೆಯುತ್ತಿರುವ ಸಂಗತಿ ಏನಾಗಿದೆ? ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆ ಪ್ರಕಾರ ಅವರ ನಿಧನದ ವರೆಗೆ ಅಝಾನ್ ಕೊಡುತ್ತಿದ್ದೆ. ಅನಂತರ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಆದೇಶ ಪ್ರಕಾರ ಅಝಾನ್ ಕೊಡುತ್ತಿದ್ದೆ. ಅವರು ನನ್ನ ಸೊತ್ತುಗಳ ಮೇಲ್ನೋಟ ಸಹ ವಹಿಸುತ್ತಿದ್ದರು. ಅನಂತರ ಅವರು ಸಹ ನಿಧನರಾದರು. ಅಲ್ಲಾಹನ ಮಾರ್ಗದಲ್ಲಿ ಮಾಡುವ ಜಿಹಾದ್‌ಗಿಂತ ಶ್ರೇಷ್ಠವಾದ ಬೇರೆ ಸಂಗತಿಯಿಲ್ಲವೆಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನೊಡನೆ ಹೇಳಿದ್ದರು. ಹೀಗೆ ಅವರು ಸಿರಿಯಾಗೆ ಹೋದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಸಿರಿಯಾಗೆ ಹೋದಾಗ, ಅವರ ಆದೇಶ ಪ್ರಕಾರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅಲ್ಲಿ ಅಝಾನ್ ಕೊಟ್ಟರು. ಹಿಂದೆಂದೂ ಇಷ್ಟು ಅಧಿಕವಾಗಿ ಅವರನ್ನು ಅಳುವುದಾಗಿ ನಾನು ಕಂಡಿಲ್ಲ ಎಂದು ವರದಿಗಾರ ಹೇಳುತ್ತಾರೆ.
(ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–1, ಪುಟ–416–417, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್)

ಹಝ್ರತ್ ಬಿಲಾಲ್‌ರ ಕೊನೆಯ ದಿನಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಬಿಲಾಲ್ ಕೊನೆಯ ವಯಸ್ಸಿನಲ್ಲಿ ಸಿರಿಯಾಗೆ ಹೋಗಿದ್ದರು. ಇವರಿಗೆ ವಿವಾಹಕ್ಕಾಗಿ ಸಂಬಂಧ ಸಿಕ್ಕುತ್ತಿರಲಿಲ್ಲವೆಂದು ಇಲ್ಲಿ ಹೇಳಲಾಗಿದೆ. ಆದರೆ ನಾನು ಹಿಂದೆ ಪ್ರಸ್ತಾಪಿಸಿದಂತೆ, ಅವರ ಹಲವು ವಿವಾಹಗಳು ನಡೆದಿದ್ದುವು. ಸಂಬಂಧಗಳು ಆಗಿದ್ದುವು. ಬಹುಶಃ ಸಿರಿಯಾಗೆ ಹೋಗಲು ಯಾರೂ ತಯಾರಿರದಿರಬಹುದು ಅಥವಾ ಸಿರಿಯಾದಲ್ಲಿ ಅವರಿಗೆ ಸಂಬಂಧ ಸಿಕ್ಕಿರಲಿಲ್ಲವೆಂದು ತೋರುತ್ತದೆ. ಹೇಗಿದ್ದರೂ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟದಲ್ಲಿ ಅವರ ಅನೇಕ ವಿವಾಹಗಳು ನಡೆದದ್ದಾಗಿ ವರದಿಗಳಲ್ಲಿ ಬಂದಿವೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಅವರು ಸಿರಿಯಾದಲ್ಲಿ ಒಂದು ಕಡೆ ವಿವಾಹ ಸಂಬಂಧಕ್ಕಾಗಿ ವಿನಂತಿಸಿದರು. ಅವರು ಹೇಳಿದರು: ನಾನು ಇತಿಯೋಪಿಯಾದವನಾಗಿದ್ದೇನೆ. ನಿಮಗೆ ಮನಸ್ಸಿಲ್ಲದಿದ್ದರೆ ವಿವಾಹ ಸಂಬಂಧ ಬೇಡ, ಆದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬಿ ಎಂದು ತಿಳಿದುಕೊಂಡು ನನಗೆ ಸಂಬಂಧ ಕೊಡುವುದಾದರೆ, ಅದು ನಿಮ್ಮ ಔದಾರ್ಯವೆಂದು ನಾನು ಭಾವಿಸುವೆನು. ಅವರು ವಿವಾಹ ಸಂಬಂಧವನ್ನು ಮಾಡಿಸಿದರು ಮತ್ತು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅಲ್ಲೇ ನೆಲೆಸಿದರು. ಹೇಗಿದ್ದರೂ ಹಿಂದೆ ಸಹ ಅವರ ವಿವಾಹಗಳು ಆಗಿದ್ದುವು. ಬಹುಶಃ ಮೊದಲಿನ ಪತ್ನಿಯರು ಮರಣಹೊಂದಿದ್ದ ಕಾರಣದಿಂದ ಅಥವಾ ಅವರೊಂದಿಗೆ ಮದೀನದಿಂದ ಹೋಗಲು ಯಾರೂ ಇಲ್ಲದ ಕಾರಣದಿಂದಲೋ ಏನೋ ಅವರು ಸಿರಿಯಾದಲ್ಲಿ ವಿವಾಹ ಮಾಡಲು ಬಯಸಿದ್ದರು. ಅವರಿಗೆ ಸಂಬಂಧ ಕೊಡುತ್ತಿರಲಿಲ್ಲವೆಂದು ಕೆಲವು ವರದಿಗಳಲ್ಲಿ ಬಂದದ್ದನ್ನು ಇಲ್ಲಿ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆದಿರುವರು. ಯಾವ ಪೂರ್ವಾಪರ ಸಂದರ್ಭದಲ್ಲಿ ಬರೆದಿದ್ದರು ಎಂದು ಅಲ್ಲಾಹನೇ ಬಲ್ಲನು. ಹೇಗಿದ್ದರೂ ಅವರು ಅಲ್ಲಿ ಸಂಬಂಧ ಕೇಳಿದ ನಂತರ ಅವರ ವಿವಾಹ ನಡೆಯಿತು ಮತ್ತು ಅವರು ಸಿರಿಯಾದಲ್ಲೇ ನೆಲೆಸಿದರು. ಮುಖ್ಯವಾದ ವಿಷಯ ಕನಸಿನದ್ದಾಗಿತ್ತು. ವಿವಾಹದ ವಿಷಯ ಸಾಂದರ್ಭಿಕವಾಗಿ ಹೇಳಿದೆ ಅಷ್ಟೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಒಂದು ಬಾರಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಿಲಾಲ್‌ರೊಡನೆ ಕನಸಿನಲ್ಲಿ ಬಂದು ಹೇಳಿದರು: ಹೇ ಬಿಲಾಲ್, ನೀನು ನನ್ನನ್ನು ಮರೆತೇ ಬಿಟ್ಟಿದಿಯಾ. ನನ್ನ ಕಬರಿನ ದರ್ಶನಕ್ಕಾಗಿ ಎಂದೂ ಬಂದಿಲ್ಲ. ಅವರು ಕೂಡಲೇ ಎಚ್ಚೆತ್ತು ಯಾತ್ರೆಯ ಸಾಮಾನುಗಳನ್ನು ತಯಾರು ಮಾಡಿ ಮದೀನಕ್ಕೆ ಹೋದರು ಹಾಗೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಬರ್ ಸಮೀಪ ನಿಂತು ಅಳುತ್ತಾ ದುಆ ಮಾಡಿದರು. ಅವರು ಆ ಸಮಯದಲ್ಲಿ ವೇದನೆಯಿಂದ ಎಷ್ಟು ಜೋರಾಗಿ ಅಳುತ್ತಿದ್ದರೆಂದರೆ, ಅವರು ಬಂದದ್ದು ಎಲ್ಲರಿಗೂ ಗೊತ್ತಾಯಿತು. ಆ ಸಮಯದಲ್ಲಿ ದೊಡ್ಡವರಾಗಿದ್ದ ಹಝ್ರತ್ ಹಸನ್ ಮತ್ತು ಹುಸೈನ್ ರಝಿಯಲ್ಲಾಹು ಅನ್‌ಹುಂ ಓಡುತ್ತಾ ಬಂದು ಹೀಗೆ ಕೇಳಿದರು: ನೀವು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಅಝಾನ್ ಕೊಡುತ್ತಿದ್ದೀರಿ ಅಲ್ಲವೇ? ಹೌದೆಂದು ಅವರು ಹೇಳಿದರು. ನಮಗೂ ನಿಮ್ಮ ಅಝಾನ್ ಆಲಿಸಬೇಕೆಂದಿದೆ ಎಂದು ಅವರಿಬ್ಬರೂ ಹೇಳಿದರು. ಹೀಗೆ ಅವರು ಅಝಾನ್ ಕೊಟ್ಟಾಗ ಜನರೆಲ್ಲರೂ ಅದನ್ನು ಆಲಿಸಿದರು. (ಖುತ್‌ಬಾತೆ ಮಹ್ಮೂದ್, ಸಂಪುಟ–25, ಪುಟ–182, ಖುತ್‌ಬ ಜುಮುಅ 10–03–1944)

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ತಮ್ಮ ಖಿಲಾಫತ್ ಕಾಲದಲ್ಲಿ ಸಿರಿಯಾದಲ್ಲಿ ಸ್ಟೈಪೆಂಡಿಗಾಗಿ, ಎಂದರೆ, ಪಿಂಚಣಿಗಾಗಿ ಖಾತೆಯ ರಿಜಿಸ್ಟರ್ ಇತ್ಯಾದಿಗಳನ್ನು ತಯಾರು ಮಾಡಿ, ಎಲ್ಲ ರಿಕಾರ್ಡನ್ನು ಪೂರ್ತಿ ಮಾಡಿದ ನಂತರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಸಿರಿಯಾಗೆ ಹೋದರು. ಅಲ್ಲೇ ಯುದ್ಧ ಮಾಡುವವರೊಡನೆ ನೆಲೆಸಿದರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹಝ್ರತ್ ಬಿಲಾಲ್‌ರೊಡನೆ ಕೇಳಿದರು: ಹೇ ಬಿಲಾಲ್ ನೀನು ನಿನ್ನ ಪಿಂಚಣಿಯ ಖಾತೆಯನ್ನು ಯಾರ ಬಳಿಯಲ್ಲಿ ಇರಿಸಿ ಹೋಗುವೆ? ಎಂದರೆ, ಲೆಕ್ಕಗಳನ್ನು ನೋಡುವ ಜವಾಬ್ದಾರಿ ಯಾರಿಗೆ ಒಪ್ಪಿಸುವೆ? ಇಲ್ಲಿ ನಿನ್ನ ಪ್ರತಿನಿಧಿ ಯಾರಾಗಿರುವರು? ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹೇಳಿದರು: ಅಬೂರುವೈಹರ ಬಳಿಯಲ್ಲಿ, ನನ್ನ ಮತ್ತು ಅವರ ಮಧ್ಯೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡಿದ ಸಾಹೋದರ್ಯ ಸಂಬಂಧವನ್ನು ನಾನು ಎಂದೂ ಉಪೇಕ್ಷಿಸುವುದಿಲ್ಲ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3,ಪುಟ–176, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಬಿಲಾಲ್‌ರ ನೇರವಾತಿನ ಒಂದು ಉದಾಹರಣೆ ವರದಿಯಲ್ಲಿ ಹೀಗೆ ಬಂದಿದೆ: ಅಮ್ರ್ ಬಿನ್ ಮೈಮೂನ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಬಿಲಾಲ್‌ರ ಸಹೋದರ ತನ್ನನ್ನು ಅರಬ್ ರಾಜ್ಯದವನು ಎಂದು ಹೇಳುತ್ತಾ ಇದ್ದನು. ತಾನು ಅರಬರಲ್ಲಿ ಸೇರಿದವನೆಂದು ಸ್ವತಃ ಭಾವಿಸುತ್ತಿದ್ದನು. ಅವನು ಅರೇಬಿಯಾದ ಒಂದು ಸ್ತ್ರೀಯ ಕುಟುಂಬಕ್ಕೆ ನಿಕಾಹಿಗಾಗಿ ಸಂದೇಶ ಕಳುಹಿಸಿದನು. ಆ ಕುಟುಂಬದವರು ಹೇಳಿದರು: ಹಝ್ರತ್ ಬಿಲಾಲ್ ಬಂದರೆ, ನಾವು ನಿಕಾಹ್ ಮಾಡಿ ಕೊಡುವೆವು. ಅನಂತರ ಹಝ್ರತ್ ಬಿಲಾಲ್ ಬಂದರು. ತಶಹ್ಹುದ್ ಓದಿದ ನಂತರ ಹೇಳಿದರು: ನಾನು ಬಿಲಾಲ್ ಬಿನ್ ರಬಾಹ್ ಆಗಿರುವೆನು. ಇವನು ನನ್ನ ತಮ್ಮ, ಇವನ ಸ್ವಭಾವ ಮತ್ತು ಧರ್ಮದ ತಳಪಾಯದಲ್ಲಿ ನೋಡುವುದಾದರೆ, ಇವನು ಒಳ್ಳೆಯ ವ್ಯಕ್ತಿಯಲ್ಲ. ನೀವು ನಿಕಾಹ್ ಮಾಡಲು ಇಚ್ಛಿಸುವರಾದರೆ, ಮಾಡಿರಿ. ಬೇಡವೆಂದಾದರೆ, ಬೇಡ. ಅವರು ಹೇಳಿದರು: ಅವರ ಸಹೋದರ ನೀವಾಗಿರುವಾಗ ನಮಗೆ ನಿಕಾಹ್ ಮಾಡಿ ಕೊಡಲು ಯಾವುದೇ ಅಡಚಣೆಯಿಲ್ಲ. ಹೀಗೆ ಅವರು ಹಝ್ರತ್ ಬಿಲಾಲ್‌ರ ಸಹೋದರನಿಗೆ ನಿಕಾಹ್ ಮಾಡಿಸಿ ಕೊಟ್ಟರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–179, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಝೈದ್ ಬಿನ್ ಅಸ್ಲಮ್ ವರದಿ ಮಾಡುತ್ತಾರೆ: ಬನೂ ಅಬೂ ಬಕೀರ್ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು 'ಇಂತಿಂಥ ವ್ಯಕ್ತಿಯೊಡನೆ ನಮ್ಮ ಸಹೋದರಿಯ ನಿಕಾಹ್ ಮಾಡಿಸಿ ಕೊಡಿರಿ' ಎಂದು ಹೇಳಿದರು. ಬಿಲಾಲ್‌ರ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು. ಮತ್ತೊಂದು ಸಲ ಅವರು ಬಂದು ಯಾವುದೋ ಒಬ್ಬ ವ್ಯಕ್ತಿಯ ಹೆಸರು ಹೇಳಿ "ಈ ವ್ಯಕ್ತಿಯೊಡನೆ ನಮ್ಮ ಸಹೋದರಿಯ ನಿಕಾಹ್ ಮಾಡಿಸಿ ಕೊಡಿರಿ ಎಂದು ಹೇಳಿದರು. ಬಿಲಾಲ್‌ರ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು. ಆ ಜನರು ಅದನ್ನು ನಿರಾಕರಿಸಿದ ನಂತರ ಮೂರನೇ ಬಾರಿ ಬಂದು 'ಇಂತಿಂಥ ವ್ಯಕ್ತಿಯೊಡನೆ ನಮ್ಮ ಸಹೋದರಿಯ ನಿಕಾಹ್ ಮಾಡಿಸಿ ಕೊಡಿರಿ' ಎಂದು ಹೇಳಿದರು. ಸ್ವರ್ಗಕ್ಕೆ ಅರ್ಹರಾದ ಜನರಲ್ಲಿ ಸೇರಿದವರಾದ ಬಿಲಾಲ್‌ರ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಡನೆ ಕೇಳಿದರು. ಆಗ ಆ ಜನರು ಹಝ್ರತ್ ಬಿಲಾಲ್‌ರಿಗೆ ತಮ್ಮ ಸಹೋದರಿಯನ್ನು ನಿಕಾಹ್ ಮಾಡಿಸಿಕೊಟ್ಟರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–179, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ವಿವಾಹ ನಡೆದಿರಲಿಲ್ಲವೆಂದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು

ಅನ್‌ಹು ಅಲ್ಲಿ ಹೇಳಿದ್ದು ಯಾವುದಾದರೂ ಪೂರ್ವಾಪರ ಸಂದರ್ಭದಲ್ಲಿ ಆಗಿರಬಹುದು. ಅವರು ವಿವಾಹ ಮಾಡಿದ್ದರು ಎಂಬುದಕ್ಕೆ ಈ ಮೇಲಿನ ಉದಾಹರಣೆ ಸಹ ಒಂದು ಸಬೂತಾಗಿದೆ. ಹಝ್ರ‌ತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ:

ಮಕ್ಕ ವಿಜಯ ಕಾಲದಲ್ಲಿ ಮುಸ್ಲಿಮರಾಗಿದ್ದ ಅಬೂಸುಫ್‌ಯಾನ್ ಮತ್ತು ಕೆಲವು ಸರದಾರರು ಒಂದು ಬಾರಿ ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲಿ, ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರನ್ನು ಭೇಟಿಯಾಗಲು ಬಂದರು. ಕಾಕತಾಳೀಯವೆಂಬಂತೆ ಅದೇ ಸಮಯದಲ್ಲಿ, ಹಝ್ರ‌ತ್ ಬಿಲಾಲ್, ಹಝ್ರ‌ತ್ ಅಮ್ಮಾರ್ ಮತ್ತು ಹಝ್ರ‌ತ್ ಸುಹೈಬ್ ಮುಂತಾದವರು ಸಹ ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರನ್ನು ಭೇಟಿಯಾಗಲು ಬಂದರು. ಇವರು ಗುಲಾಮರಾಗಿದ್ದ ಮತ್ತು ಬಹಳ ಬಡವರಾಗಿದ್ದ ವ್ಯಕ್ತಿಗಳಾಗಿದ್ದರು. ಆದರೆ ಇವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಮೊದಲಿಗರಲ್ಲಿ ಸೇರಿದ್ದರು. ಇವರು ಬಂದ ಬಗ್ಗೆ ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ತಿಳಿಸಲಾದಾಗ, ಅವರು ಹಝ್ರ‌ತ್ ಬಿಲಾಲ್ ಮುಂತಾದವರನ್ನು ಮೊದಲು ಭೇಟಿಯಾಗಲು ಕರೆದರು. ಈಗಲೂ ಜಾಹಿಲಿಯ್ಯಾ ಕಾಲದ ಅಂಶ ಅಂತರಂಗದಲ್ಲಿ ಬಾಕಿಯಿದ್ದ ಅಬೂಸುಫ್‌ಯಾನ್ ಇದನ್ನು ಕಂಡಾಗ ಕೋಪದಿಂದ ಕೆಂಡವಾದರು. ಅವರು ಹೇಳಿದರು: ಈ ಅಪಮಾನವೂ ನಮಗೆ ನೋಡಬೇಕಾಗಿ ಬಂದಿದೆ. ನಾವಿಲ್ಲಿ ಕಾಯುತ್ತಿದ್ದೇವೆ ಮತ್ತು ಗುಲಾಮರಿಗೆ ನಮಗಿಂತ ಮೊದಲು ಭೇಟಿಯಾಗಲು ಸಂದರ್ಭ ಒದಗಿಸಲಾಗಿದೆ. ಇದನ್ನು ಕೇಳಿದ ಸುಹೈಲ್ ತಟ್ಟನೇ ಹೇಳಿದರು: ಇದು ಯಾರು ತಪ್ಪು? ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮನ್ನೆಲ್ಲ ಅಲ್ಲಾಹನ ಕಡೆಗೆ ಕರೆದಿದ್ದರು. ಆದರೆ ಈ ಗುಲಾಮರು ತಡಮಾಡದೆ ಅವರನ್ನು ಅಂಗೀಕರಿಸಿದರು, ನಾವು ಅವರನ್ನು ನಂಬುವುದರಲ್ಲಿ ತಡಮಾಡಿದೆವು. ಹೀಗಿರುವಾಗ ಅವರಿಗೆ ಆದ್ಯತೆ ಸಿಗಲೇ ಬೇಕಲ್ಲವೇ? (ಸೀರ್‌ತ್ ಖಾತುಮುನ್ನಬೀಈನ್, ಪುಟ-369)

ಹಝ್ರ‌ತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು, ಹಝ್ರ‌ತ್ ಬಿಲಾಲ್‌ರ ಸ್ಥಾನ ಮತ್ತು ಪದವಿಯನ್ನು ವಿವರಿಸುತ್ತಾ ಈ ಘಟನೆಯನ್ನು ಹೀಗೆ ಹೇಳಿದ್ದಾರೆ: ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹು ತಮ್ಮ ಖಿಲಾಫತ್ ಕಾಲದಲ್ಲಿ ಒಂದು ಬಾರಿ ಮಕ್ಕ ಪಟ್ಟಣಕ್ಕೆ ಬಂದಿದ್ದರು. ಯಾರ ತಲೆಯ ಕೂದಲುಗಳನ್ನು ಹಿಡಿದುಕೊಂಡು ಜನರು ಎಳೆದುಕೊಂಡು ಹೋಗುತ್ತಿದ್ದರೋ ಆ ಗುಲಾಮರು ಒಬ್ಬೊಬ್ಬರಾಗಿ ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರನ್ನು ಭೇಟಿಯಾಗಲು ಬಂದರು. ಅಂದು ಈದಿನ ದಿನವಾಗಿತ್ತು. ಈ ಗುಲಾಮರು ಬರುವುದಕ್ಕೆ ಮುಂಚಿತವಾಗಿ ಮಕ್ಕದ ದೊಡ್ಡ ದೊಡ್ಡ ಸರದಾರರ ಮಕ್ಕಳು ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರನ್ನು ಭೇಟಿಯಾಗಲು ಅಲ್ಲಿ ಹಾಜರಾಗಿದ್ದರು. ಅವರು ಅಲ್ಲಿ ಕುಳಿತಿರುವಾಗಲೇ ಹಝ್ರ‌ತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಬಂದರು. ಗುಲಾಮರಾಗಿದ್ದ ಅದೇ ಬಿಲಾಲ್, ಯಾರನ್ನು ಜನರು ಹೊಡೆಯುತ್ತಿದ್ದರೋ, ಯಾರನ್ನು ಕಲ್ಲಿನ ರಸ್ತೆಯಲ್ಲಿ ಬರಿಮೈಯಲ್ಲಿ ಎಳೆದುಕೊಂಡು ಹೋಗುತ್ತಿದ್ದರೋ ಯಾರ ಎದೆಯ ಮೇಲೆ ದೊಡ್ಡ ದೊಡ್ಡ ಭಾರವುಳ್ಳ ಕಲ್ಲುಗಳನ್ನು ಇರಿಸಲಾಗುತ್ತಿತ್ತೋ ಅದೇ ಬಿಲಾಲ್. ಅವರೊಡನೆ ಲಾತ್ ಮತ್ತು ಉಝ್ಝರ ಪೂಜೆ ಮಾಡಲು ಹೇಳುತ್ತಿದ್ದಾಗ ಅವರು **ಅಶ್‌ಹದು ಅನ್‌ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುತ್ತಿದ್ದರು. ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹು ಹಝ್ರ‌ತ್ ಬಿಲಾಲ್‌ರನ್ನು ನೋಡಿದಾಗ, ಸರದಾರರೊಡನೆ ಸ್ವಲ್ಪ ಹಿಂದಕ್ಕೆ ಸರಿಯಲು ಹೇಳಿದರು. ಹಝ್ರ‌ತ್ ಬಿಲಾಲ್‌ರಿಗೆ ಕುಳಿತುಕೊಳ್ಳಲು ಜಾಗಕೊಡಲು ಅವರೊಡನೆ ಹೇಳಿದರು. ಅವರು ಅಲ್ಲಿ ಕುಳಿತ ಕೂಡಲೆ ಮತ್ತೋರ್ವ ಗುಲಾಮರಾದ ಸಹಾಬಿ ಅಲ್ಲಿ ಬಂದರು. ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹು ಪುನಃ ಆ ಸರದಾರರೊಡನೆ ಹೇಳಿದರು: ಸ್ವಲ್ಪ ಹಿಂದೆ ಸರಿದು ಅವರಿಗೆ ಕುಳಿತುಕೊಳ್ಳಲು ಜಾಗ ಕೊಡಿರಿ. ಅದೇ ಸಮಯದಲ್ಲಿ ಒಬ್ಬರ ನಂತರ ಇನ್ನೊಬ್ಬರು ಎಂಬಂತೆ ಎಂಟು ಹತ್ತು ಗುಲಾಮರು ಅಲ್ಲಿಗೆ ಬಂದರು. ಈ ಸರದಾರರನ್ನು ಅವಮಾನಗೊಳಿಸಲು ಅಲ್ಲಾಹನು ಇಚ್ಛಿಸಿದ್ದನು. ಪ್ರತಿ ಸಲ ಅವರೊಡನೆ ಸ್ವಲ್ಪ ಹಿಂದಕ್ಕೆ ಸರಿಯಿರಿ ಮತ್ತು ಗುಲಾಮರಿಗೆ ಕುಳಿತುಕೊಳ್ಳಲು ಸ್ಥಳ ಕೊಡಿರಿ ಎಂದೇ ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳುತ್ತಾ ಹೋಗುತ್ತಿದ್ದರು. ಆ ಕಾಲದಲ್ಲಿ ದೊಡ್ಡ ದೊಡ್ಡ ಹಾಲ್‌ಗಳನ್ನೆಲ್ಲ ನಿರ್ಮಿಸಲಾಗುತ್ತಿರಲಿಲ್ಲ. ಸಾಧಾರಣವಾದ ಸಣ್ಣ ಕೊಠಡಿಯಿರುತ್ತಿತ್ತು. ಅದರಲ್ಲಿ ಹೆಚ್ಚಿನ ಜನರಿಗೆ ಕುಳಿತುಕೊಳ್ಳಲು ಸಾಧ್ಯವಿರಲಿಲ್ಲ. ಗುಲಾಮರಾದ ಸಹಾಬರಿಂದ ಕೊಠಡಿ ತುಂಬಿದಾಗ ಈ ಸರದಾರರಿಗೆ ಪಾದರಕ್ಷೆ ಇರಿಸುವ ಜಾಗದಲ್ಲಿ ಕುಳಿತುಕೊಳ್ಳಬೇಕಾಗಿ ಬಂತು. ಈ ಅಪಮಾನ ಅವರಿಗೆ ಸಹಿಸಲು ಸಾಧ್ಯವಿರಲಿಲ್ಲ. ಅವರು ಅಲ್ಲಿಂದ ಎದ್ದು ಹೊರಗೆ ಹೋಗಿ ಹೀಗೆ ಹೇಳಲು ಶುರುಮಾಡಿದರು: ಇಂದು ನಮ್ಮನ್ನು ಹೇಗೆ ಅವಮಾನಿಸಲಾಯಿತೆಂದು ನೋಡಿದ್ದೀರಲ್ಲವೇ? ನಮ್ಮ ಸೇವೆ ಮಾಡುತ್ತಿದ್ದ ಗುಲಾಮರನ್ನು ಮುಂದೆ ಕುಳ್ಳಿರಿಸಲಾಗಿದೆ. ಆದರೆ ನಮ್ಮನ್ನು ಹಿಂದೆ ಸರಿಯಲು ಒತ್ತಾಯ ಮಾಡಲಾಗಿದೆ. ನಾವು ಹಿಂದೆ ಸರಿಯುತ್ತಾ ಪಾದರಕ್ಷೆಯಿರುವ ಜಾಗಕ್ಕೆ ತಲುಪಿದೆವು. ಹೀಗೆ ನಾವು ಎಲ್ಲರ ದೃಷ್ಟಿಯಲ್ಲಿ ನಿಂದ್ಯರೂ ಅಪಮಾನಿತರೂ ಆಗಿದೆವು. ಇವರಲ್ಲಿ ಬುದ್ಧಿವಂತನಾದ ಒಬ್ಬನು ಇದನ್ನೆಲ್ಲ ಕೇಳಿ ಹೇಳಿದರು: ನೀವು ಹೇಳಿದ್ದು ಸರಿಯೇ, ನಾವು ಅವಮಾನಿತರಾಗಿದ್ದೇವೆ ಎಂಬುದು ಸರಿಯೇ ಆಗಿದೆ. ಆದರೆ ಸವಾಲು ಏನೆಂದರೆ, ಇವೆಲ್ಲ ಯಾರ ಕರ್ಮದಿಂದ ಆಯಿತು? ನಮ್ಮ ತಂದೆಯಂದಿರು ಮತ್ತು ಹಿರಿಯರು ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮತ್ತು ಅವರ ಸಹಚರರನ್ನು ಹೊಡೆಯುತ್ತಿದ್ದಾಗ, ಈ ಗುಲಾಮರು ತಮ್ಮ ಜೀವಗಳನ್ನು ಅವರಿಗಾಗಿ ಅರ್ಪಿಸುತ್ತಿದ್ದರು. ಇಂದು ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಡಳಿತ ಮತ್ತು ಅಧಿಕಾರದ ಕಾಲವಾಗಿದೆ. ಆದ್ದರಿಂದ ಅವರನ್ನು ನಂಬುವವರು ಯಾರಿಗೆ ಹೆಚ್ಚಿನ ಗೌರವ ಕೊಡುವರು ಎಂದು ನೀವೇ ತೀರ್ಮಾನಿಸಿರಿ. ಹೊಡೆಯುತ್ತಿದ್ದ ನಿಮಗೆ ಗೌರವಕೊಡಬೇಕಿತ್ತೋ ಅಥವಾ ತಮ್ಮ ಜೀವಗಳನ್ನು ಇಸ್ಲಾಮಿಗಾಗಿ ತ್ಯಾಗಮಾಡುತ್ತಿದ್ದ ಈ ಗುಲಾಮರಿಗೆ ಗೌರವ ಕೊಡಬೇಕಿತ್ತೋ ಎಂದು ನೀವೇ ಆಲೋಚಿಸಿರಿ. ಅವರಿಗೆ ಗೌರವ ಸಿಗಬೇಕಿತ್ತು ಎಂದೇ ನಿಮ್ಮ ಉತ್ತರವಾಗಿದ್ದರೆ, ಇಂದು ನೀವು ದೂರುವುದರಲ್ಲಿ ಅರ್ಥವೇನಿದೆ? ಗುಲಾಮರೊಂದಿಗೆ ಈಗ ವರ್ತಿಸಲಾಗುವ ರೀತಿಯಲ್ಲಿ ನಿಮ್ಮೊಡನೆ ವರ್ತಿಸಲಾಗುತ್ತಿಲ್ಲ ಎಂಬುವುದಕ್ಕೆ ಕಾರಣ ನಿಮ್ಮ ತಂದೆ ತಾತಂದಿರು ಮಾಡಿದ ಕರ್ಮಗಳೇ. ಹೀಗೆ ಒಬ್ಬ ಬುದ್ಧಿವಂತ ವ್ಯಕ್ತಿ ಅವರೊಡನೆ ಇದನ್ನೆಲ್ಲ ಹೇಳಿದಾಗ ಅವರಿಗೆ ಎಲ್ಲವೂ ಮನವರಿಕೆಯಾಯಿತು. ಆಗ ಅವರು ಹೇಳಿದರು: ಆದರೆ ಈ ಅವಮಾನವನ್ನು ದೂರಮಾಡುವುದು ಹೇಗೆ? ಇದಕ್ಕೆ ಚಿಕಿತ್ಸೆ ಇದೆಯೇ ಅಥವಾ ಇಲ್ಲವೇ ಎಂಬುದೇ ಈಗ ನಮ್ಮ ಮುಂದಿರುವ ಸವಾಲು. ನಿಸ್ಸಂಶಯವಾಗಿಯೂ ನಮ್ಮ ತಂದೆತಾತರಿಂದ ದೊಡ್ಡದಾದ ತಪ್ಪಾಯಿತು. ಆದರೆ ಈ ತಪ್ಪಿಗೆ ಏನಾದರೂ ಚಿಕಿತ್ಸೆ ಇರಲೇ ಬೇಕಲ್ಲವೇ? ಅದರ ಮೂಲಕ ನಮ್ಮ ಹಣೆಯಿಂದ ಈ ನಿಂದನೆಯ ಕಳಂಕ ತೊಳೆಯಲ್ಪಡಬೇಕಲ್ಲವೇ? ಹೇಗಿದ್ದರೂ ಇದಕ್ಕಿರುವ ಪರಿಹಾರವೇನೆಂದು ನಮಗೆ ಗೊತ್ತಾಗುತ್ತಿಲ್ಲ, ಬನ್ನಿರಿ ನಾವೆಲ್ಲರೂ ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರೊಡನೆ ಇದರ ಬಗ್ಗೆ ಕೇಳೋಣ ಎಂದು ತೀರ್ಮಾನಿಸುತ್ತಾ ಅವರು ಹಝ್ರ‌ತ್ ಉಮರ್ ರಝಿಯಲ್ಲಾಹುರ ಬಳಿಗೆ ಹೋದರು. ಅಷ್ಟರಲ್ಲಿ ಅಲ್ಲಿದ್ದ ಎಲ್ಲ ಸಹಾಬಿಯರು ಅಲ್ಲಿಂದ ಹೊರಟುಹೋಗಿದ್ದರು. ಅವರು ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳಿದರು: ಇಂದು ಈ ಸಭೆಗೆ ಬಂದು ನಮಗೆ ಉಂಟಾದ ದುಃಖದ ಕುರಿತು ನಿಮ್ಮೊಂದಿಗೆ ಸಲಹೆ ಕೇಳಲು ನಾವು ಬಂದಿದ್ದೇವೆ. ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳಿದರು: ತಪ್ಪಾಗಿ ತಿಳಿದುಕೊಳ್ಳಬೇಡಿರಿ. ಈ ಗುಲಾಮರು ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬಿಯರು ಆಗಿದ್ದರು. ಇವರು ಹಝ್ರ‌ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಭೆಯಲ್ಲಿ ಯಾವಾಗಲೂ ಮುಂದೆ ಕುಳಿತುಕೊಳ್ಳುತ್ತಿದ್ದರು. ಆದ್ದರಿಂದ ನಾನು ಸಹ ಅವರನ್ನು ಮುಂದೆ ಕುಳ್ಳಿರಿಸಲು ನಿರ್ಬಂಧಿತನಾಗಿದ್ದೆ. ನಿಸ್ಸಂಶಯವಾಗಿಯೂ ನಾನು ಮಾಡಿದ್ದನ್ನು ಕಂಡು ನಿಮಗೆ ದುಃಖವಾಗಿರಬಹುದು, ಆದರೆ ನನಗೆ ಬೇರೆ ಮಾರ್ಗವಿರಲಿಲ್ಲ. ಅವರು ಹೇಳಿದರು: ನಾವು ನಿಮ್ಮ ವಿವಶದ ಅವಸ್ಥೆಯನ್ನು ಅರ್ಥಮಾಡಿಕೊಂಡಿದ್ದೇವೆ. ಈ ಅವಮಾನಕ್ಕೆ ಏನಾದರೂ ಪರಿಹಾರ ಮಾರ್ಗವಿದೆಯೇ ಎಂದು ಮಾತ್ರ ನಾವೀಗ ಕೇಳಲು ಬಂದಿದ್ದೇವೆ. ಕಲೆಯನ್ನು ತೊಳೆದು ದೂರಮಾಡುವಂತಹ ಯಾವುದಾದರೂ ನೀರು ಲಭ್ಯವೇ? ಎಂದು ಕೇಳಲು ಬಂದಿದ್ದೇವೆ. ಈ ಯುವಕರ ತಂದೆತಾತಂದಿರ ವೈಭವ, ಶೀವಿ ಮತ್ತು ದರ್ಪವನ್ನು ಗತಕಾಲದಲ್ಲಿ ನೋಡಿದ್ದ ಹಝ್ರ‌ತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಈ ಯುವಕರ ಮಾತುಗಳನ್ನು ಕೇಳಿದಾಗ ದುಃಖದಿಂದ ಕಣ್ಣೀರು ಬಂತು. ಈ ಜನರು ತಮ್ಮ ಪಾಪಗಳ ಕಾರಣದಿಂದ ಎಲ್ಲಿಂದ ಎಲ್ಲಿಗೆ ತಲುಪಿದರು ಎಂದು ಅವರು ಆಲೋಚಿಸಿದರು. ಅವರು ಆ ಸಮಯದಲ್ಲಿ ಎಷ್ಟು ದುಃಖಿತರಾಗಿದ್ದರು ಎಂದರೆ, ಯುವಕರ ಮಾತುಗಳಿಗೆ ಉತ್ತರಕೊಡಲು ಸಹ ಅವರಿಂದ ಆಗುತ್ತಿರಲಿಲ್ಲ. ಅವರು ಕೇವಲ ತಮ್ಮ ಕೈಯನ್ನು ಎತ್ತಿ ಸಿರಿಯಾದ ಕಡೆಗೆ ಬೊಟ್ಟು ಮಾಡಿ ತೋರಿಸಿದರು. ಆ ಸಮಯದಲ್ಲಿ ಕೈಸರಿನ ಸೈನ್ಯದೊಂದಿಗೆ ಯುದ್ಧ ನಡೆಯುತ್ತಿತ್ತು. ಅವರು ನೀಡಿದ ಸೂಚನೆ ಏನೆಂದರೆ, ಈ ಯುದ್ಧದಲ್ಲಿ ಭಾಗವಹಿಸಿ ತಮ್ಮ ಜೀವ ಅರ್ಪಿಸುವುದರಿಂದ ಮಾತ್ರವೇ ಈಗ ಈ ಅವಮಾನದ ಗುರುತು ತೊಳೆದು ಹೋಗುವುದು. ಹೀಗೆ ಅವರು ತಕ್ಷಣವೇ ಹೊರಗೆ ಹೋಗಿ ತಮ್ಮ ಒಂಟೆಗಳಲ್ಲಿ ಸವಾರರಾಗಿ ಸಿರಿಯಾದ ಕಡೆಗೆ ಹೊರಟುಹೋದರು. ಅವರಲ್ಲಿ ಒಬ್ಬರೂ ಜೀವಂತವಾಗಿ ವಾಪಸ್ಸು ಬರಲಿಲ್ಲ ಎಂದು ಚರಿತ್ರೆ ಹೇಳುತ್ತದೆ. ಹೀಗೆ ಅವರು ತಮ್ಮ ರಕ್ತದಿಂದ ಅವರ ತಂದೆ ತಾತರ ದುಷ್ಕರ್ಮಗಳ ಕಾರಣದಿಂದ ಅವರ ಮೇಲೆ ಉಂಟಾದ ಈ ಅವಮಾನದ ಕಳಂಕವನ್ನು ಅಳಿಸಿದರು.

ಒಟ್ಟಿನಲ್ಲಿ, ಮುಖ್ಯವಾದ ವಿಷಯವೆಂದರೆ, ಯಥಾರ್ಥ ಸ್ಥಾನ ಲಭಿಸಬೇಕಾದರೆ ತ್ಯಾಗಗಳನ್ನು ಮಾಡಬೇಕಾಗುತ್ತದೆ. ಇದು ಇಸ್ಲಾಮಿನ ಮನೋಹರವಾದ ಪಾಠವಾಗಿದೆ. ಯಾರು ತ್ಯಾಗಗಳನ್ನು ಮಾಡುತ್ತಾರೋ, ಆರಂಭದಿಂದಲೇ ನಿಷ್ಠೆಯನ್ನು ತೋರಿಸುತ್ತಾರೋ ಅವರ ಪದವಿ ಹೇಗಿದ್ದರೂ ಉನ್ನತವೇ ಆಗಿರುವುದು. ಅವರು ನೀಗ್ರೋ ಗುಲಾಮರಾಗಿದ್ದರೂ ಅಥವಾ ಬೇರೆ ಯಾವುದೇ ವರ್ಗದ ಗುಲಾಮರಾಗಿದ್ದರೂ ಸರಿ. ಯೋಗ್ಯತೆಗೆ ಇರುವ ಮಾನದಂಡವಾಗಿ ಇಸ್ಲಾಮ್ ಇದನ್ನು ಮುಂದಿರಿಸುತ್ತದೆ. ಯಾರು ಶ್ರೀಮಂತ ಯಾರು ಬಡಬ ಎಂಬುವುದನು ಇಸ್ಲಾಂ ಅರ್ಹತೆಯನ್ನಾಗಿ ಮಾಡಿಲ್ಲ. ತ್ಯಾಗಗಳನ್ನು ಮಾಡುವವರಾದರೆ, ನಿಷ್ಠೆ ತೋರಿಸುವವರಾಗಿದ್ದರೆ, ತಮ್ಮ ಜೀವವನ್ನು ಅರ್ಪಿಸಲು ಸಹ ಸಿದ್ಧರಾಗಿರುವವರಾದರೆ, ಎಲ್ಲವನ್ನೂ ತ್ಯಾಗಮಾಡುವವರಾದರೆ, ಪದವಿ ಲಭಿಸುವುದು. ಹಝ್ರತ್ ಬಿಲಾಲ್‌ರ ಪ್ರಸ್ತಾಪ ಮುಂದಿನ ಬಾರಿಯೂ ಜಾರಿಯಲ್ಲಿರುವುದು – **ಇನ್‌ಶಾ ಅಲ್ಲಾಹ್**.

****************

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಬಗ್ಗೆ ಮೊದಲೇ ನಾನು ಖುತುಬದಲ್ಲಿ ವಿವರಿಸಿದ್ದೇನೆ. ಈ ಬದರ್ ಖಾದಿಯಾನ್ ನಝಾರತ್ ಇಶಾಅತ್ ತುಂಬ ಒಳ್ಳೆಯ ಸಾಧನೆ ಮಾಡಿದ್ದಾರೆ.

ಅದೇ ರೀತಿ ತಬ್ಲೀಗ್ (ಪ್ರಚಾರ) ಕಾರ್ಯವು ಆಗುತ್ತಿದೆ. ಸಾಧ್ಯವಾದಷ್ಟು ಮಟ್ಟಿಗೆ ಆನ್‌ಲೈನ್ ನಲ್ಲಿಯೇ ತಬ್ಲಿಗ್ ಕಾರ್ಯ ನಡೆದಿದೆ.

ಅರೆಬಿ Desk (ವಿಭಾಗ) ಇದೆ. ಅದರಡಿಯಲ್ಲಿ ಹಿಂದಿನ ವರ್ಷ ತನಕ ಮುದ್ರಿತಗೊಂಡ ಗ್ರಂಥಗಳ ಹಾಗೂ ಬಿತ್ತಿಪತ್ರಗಳು ಅರೆಬಿ ಭಾಷೆಯಲ್ಲಿ ತಯಾರಾದ ಸಂಖ್ಯೆ 145 ಆಗಿವೆ. ರೂಹಾನಿ ಖಝಾಯಿನ್ ಸಂಪುಟ 20 ಅದರಲ್ಲಿ 6 ಗ್ರಂಥಗಳು ಸೇರಿವೆ. ಅದು ಈ ವರ್ಷ ಮುದ್ರಣೆಗಾಗಿ ಕಳುಹಿಸಿಕೊಡಲಾಗಿದೆ. ತಫ್ಸೀರ್ ಕಬೀರ್ ಪ್ರಥಮ ಸಂಪುಟವು ಕಳುಹಿಸಲಾಗಿದೆ. ಅದಲ್ಲಧೆ ಹಝ್ರತ್ ಮಸೀಹ್ ಮೌಊದ್(ಅ) ರವರ ಹಲವು ಗ್ರಂಥಗಳ ಅನುವಾದದ ಕೆಲಸ ನಡೆಯುತ್ತಿದೆ. ಅದೇ ರೀತಿ ಖಲೀಫರುಗಳ ಭಾಷಣಗಳು ಮತ್ತು ಬರಹಗಳ ಅನುವಾದದ ಕೆಲಸವೂ ಆಗುತ್ತಿದೆ. ಕೆಲವೊಂದು ಪೂರ್ಣಗೊಳಿಸಿ ಮುದ್ರಣಕ್ಕೆ ಕಳುಹಿಸಿಯೂ ಆಗಿದೆ. ಇನ್‌ಶಾ ಅಲ್ಲಾಹ್ ಶೀಘ್ರವಾಗಿ ಅವು ಸಹ ಬರುವವು. ಜಮಾಅತಿನ ಕೇಂದ್ರೀಯ ವೆಬ್‌ಸೈಟ್ ಅಲ್‌ಹಮ್ದುಲಿಲ್ಲಾಹ್ ಇಲ್ಲಿಯವರೆಗೆ ಮುದ್ರಿತಗೊಳ್ಳುವ ಎಲ್ಲ ಅರೆಬಿ ಗ್ರಂಥಗಳು ಮತ್ತು ನನ್ನ ಜುಮಅ ಕುತುಬಗಳು ಮತ್ತು ಭಾಷಣಗಳ ಅನುವಾದ ಹಾಗೂ ಹಲವು ಪ್ರಬಂಧಗಳು ಮತ್ತು ನೂರಾರು ಪ್ರಶ್ನೆಗಳ ಮತ್ತು ಆಕ್ಷೇಪಗಳ ತೃಪ್ತಿದಾಯಕ ಉತ್ತರಗಳು ನೀಡಲಾಗಿದೆ. ಅದನ್ನು ಸಹ ಅಪ್‌ಡೇಟ್ ಮಾಡಲಾಗುತ್ತಿದೆ. ಹವಾರುಲ್ ಮುವಾಶಿರ್, ಲಿಖಾ ಮಅಲ್ ಅರಬ್, ಮಿನ್‌ಹಾಜುತ್ತಾಲಿಬೀನ್, ಮಜಾಲಿಸೆ ಝಿಕ್ರ್, ಇರ್‌ಫಾನ್ ಇಲಾಹಿ ಮತ್ತು ಸೈರ್ಝ್ ಹುದಾಗಳ ಕಾರ್ಯಕ್ರಮ ವಿಡಿಯೋಗಳು ಸಹ ಅದರಲ್ಲಿದೆ. ಖುತುಬಗಳಂತೂ 2008 ರಿಂದ ನಿರಂತರ ಹಾಕಲಾಗುತ್ತಿದೆ. ಅದೇ ರೀತಿ "ಅತ್ತಖ್ವಾ" ಪತ್ರಿಕೆಯು ವೆಬ್‌ಸೈಟ್ ಮೇಲೆ ಲಭ್ಯವಿದೆ.

ಫ್ರೆಂಚ್ ಡೆಸ್ಕ್: ಇದರಲ್ಲಿಯೂ ಒಖಿಂ ಮೇಲೆ ಪ್ರಸಾರಗೊಳ್ಳುವ ಖುತುಬಾತ್ ಮತ್ತು ವಿವಿಧ ಕಾರ್ಯಕ್ರಮಗಳ ಫ್ರೆಂಚ್ ಅನುವಾದ ಜಮಾಅತಿನ ಸಾಹಿತ್ಯ ಮತ್ತು ಅನುವಾದದ ಕಾರ್ಯ ಅವರಿಗೆ ವಹಿಸಲಾಗಿದೆ. ಅಲ್ಲದೇ ಫ್ರೆಂಚ್ ದೇಶಗಳೊಡನೆ ಮಾಡುವ ಪತ್ರ ವ್ಯವಹಾರಗಳ ಕಾರ್ಯವೂ ಅದರಲ್ಲಿ ಸೇರಿದೆ. ಸಾಮಾಜಿಕ ಮಾಧ್ಯಮ ಮತ್ತು ಫೆಂಚ್ ವೆಬ್‌ಸೈಟ್ ಮತ್ತು ಫ್ರೆಂಚ್ ವೆಬ್ ಟಿವಿ ಮೂಲಕ ಅಹ್ಮದಿಯತ್ ವಾಸ್ತವಿಕ ಇಸ್ಲಾಮಿನ ಪ್ರಚಾರದ ಕಾರ್ಯ ಅವರಿಗೆ ವಹಿಸಲಾಗಿದೆ. ನವೆಂಬರ್ 2009 ರಲ್ಲಿ ಫೆಂಚ್ ವೆಬ್‌ಸೈಟ್ ಜಾರಿಗೊಳಿಸಲಾಗಿತ್ತು. ಇಲ್ಲಿಯವರೆಗೆ 55.1 ಮಿಲಿಯನ್‌ಗಿಂತ ಹೆಚ್ಚಿನ ಪ್ರವಾಸಿಗಳು ಈ ವೆಬ್‌ಸೈಟ್‌ನ್ನು ವೀಕ್ಷಿಸಿದರು. ಜನರ ಪ್ರಶ್ನೆಗಳಿಗೆ ಇ–ಮೇಲ್ ಮೂಲಕ ಉತ್ತರ ನೀಡಲಾಗುತ್ತಿದೆ. ಅದೇ ರೀತಿ ಜುಮಅ ಖುತುಬಗಳ ಆಡಿಯೋ ವೀಡಿಯೋ ರೆಕಾರ್ಡಿಂಗ್ ಕ್ರಮಬದ್ಧವಾಗಿ ಅಪ್‌ಲೋಡ್ ಮಾಡಲಾಗುತ್ತಿದೆ. ಅದಲ್ಲದೇ ಇನ್ನು ಬಹಳಷ್ಟು ಕಾರ್ಯಗಳು ಅವರಿಗೆ ವಹಿಸಿಕೊಡಲಾಗಿದೆ.

ಟರ್ಕಿಶ್ ಡೆಸ್ಕ್ : – ಇಲ್ಲಿಯೂ ಸಹ ಪ್ರಸಕ್ತ ವರ್ಷ ಸುಮಾರು 18, 19 ಗ್ರಂತಗಳ ಅನುವಾದಗಳನ್ನು ಮರುಪರಿಶೀಲಿಸಿ ಮುದ್ರಣಕ್ಕೆ ಸಿದ್ಧಗೊಳಿಸಲಾಗಿದೆ. ಗ್ರಂಥಗಳ ಅನುವಾದಗಳನ್ನು ಮರುಪರಿಶೀಲಿಸಿ ಮುದ್ರಣಕ್ಕೆ ಸಿದ್ಧಗೊಳಿಸಲಾಗಿದೆ. ಇನ್‌ಶಾಅಲ್ಲಾಹ್, ಶೀಘ್ರವಾಗಿ ಅವು ಬರುವವು. ಒಖಿಂ ದಲ್ಲಿ ಪ್ರಸಾರ ಮಾಡಲು ತುರ್ಕಿ ಭಾಷೆಯಲ್ಲಿ ಪ್ರಸಕ್ತ ವರ್ಷ 43 ಕಾರ್ಯಕ್ರಮಗಳನ್ನು ರೆಕಾರ್ಡ್ ಮಾಡಲಾಗಿದೆ. ತ್ರೈಮಾಸಿಕ ತುರ್ಕಿ ಪತ್ರಿಕೆ, "ಮಅನವಿಯಾತ್' ಜರ್ಮನಿಯಿಂದ ನಿಯಮಿತವಾಗಿ ಪ್ರಸಾರ ಮಾಡಲಾಗುತ್ತಿದೆ. ಜರ್ಮನಿಯಲ್ಲಿ ವಾಸಿಸುವ ಮುರಬ್ಬಿಗಳು ಪ್ರತಿ ವಾರ ಪ್ರಶ್ನಾವಳಿ ಅಥವಾ ಯಾವುದೇ ವಿಷಯದ ಮೇಲೆ ಚರ್ಚೆ ಆಧಾರಿತ ತುರ್ಕಿಶ್ ಕಾರ್ಯಕ್ರಮಗಳನ್ನು ರೆಕಾರ್ಡ್ ಮಾಡಲಾಗುತ್ತಿದೆ. ಅದು ನಂತರ Internet ಮೇಲೆ ಧಾರ್ಮಿಕ ಪ್ರಶ್ನಾವಳಿ ಕಾರ್ಯಕ್ರಮ ಪ್ರಸ್ತುತ ಪಡಿಸಲಾಗುತ್ತದೆ. ಅದರಲ್ಲಿ ತುರ್ಕ್ ಅಹ್ಮದಿ ಬಾಲಕ, ಬಾಲಕಿಯರು ಭಾಗವಹಿಸುತ್ತಾರೆ.

ರಷ್ಯನ್ ಡೆಸ್ಕ್: ಇದರಲ್ಲಿಯೂ ಎಲ್ಲಾ ಖುತುಬ ಜುಮಅಗಳ ಮತ್ತು ಭಾಷಣಗಳ ಅನುವಾದದ ಕಾರ್ಯ ಅವರಿಗೆ ವಹಿಸಿಕೊಡಲಾಗಿದೆ. ಉತ್ತಮ ರೀತಿಯಲ್ಲಿ ಅನುವಾದ ಕಾರ್ಯ ನಡೆದಿದೆ. ಅದೇ ರೀತಿ ಆ ಅನುವಾದ ಮಾಡುವವರಲ್ಲಿ ನಮ್ಮ ಪಾಕಿಸ್ತಾನಿ ಮುರಬ್ಬಿಗಳಿದ್ದಾರೆ. ಅವರು ಭಾಷೆಯನ್ನು ಕಲಿತಿದ್ದಾರೆ. ಅವರುಗಳಲ್ಲದೇ ಅಲ್ಲಿಯ ರಷ್ಯನ್ ಜನರಿಂದ ಎಮ್ಮೆಲ್ ಸಾಹಿಬ್ ಮತ್ತು ತಫಿಯುಲ್ಲಾಹ್ ಸಾಹಿಬ್ ಸೇರಿದ್ದಾರೆ. ಅವರ ಅನುವಾದದ ಪರಿಶೀಲನೆ ರುಸ್ತುಮ್ ಹಮಾದಿ ಸಾಹಿಬ್ ಮಾಡುತ್ತಿದ್ದಾರೆ. ಅವರು ನಮ್ಮ ಮುಅಲ್ಲಿಮ್ ಆಗಿದ್ದಾರೆ. ಕುತುಬಾ ಜುಮಅ ವಾರದಲ್ಲಿ ಎರಡು ದಿನಗಳಲ್ಲಿ ಸೋಮವಾರ ಮತ್ತು ಗುರುವಾರದಂದು ಒಖಿಂ ಮೇಲೆ ರಷ್ಯನ್ ಅನುವಾದ ಬಿತ್ತರಿಸಲಾಗುತ್ತಿದೆ. ಅದಲ್ಲದೇ Youtube ಮತ್ತು Rutube ನಲ್ಲೂ ಬಿತ್ತಿರಿಸಲಾಗುತ್ತದೆ. ಪ್ರಸಕ್ತ ವರ್ಷ ಕೇವಲ ಯೂಟ್ಯೂಬ್ ಮೂಲಕ 57 ಸಾವಿರ ಜನರು ಕುತುಬಾ ಜುಮಅ ಆಲಿಸಿದರು.

ರಷ್ಯನ್, ಉಝ್‌ಬೆಕ್, ಖಾಝಿಖ್, ಖಿರ್‌ಗಿಝ್, ತಾಜಿಕ್ ಭಾಷೆಗಳಲ್ಲಿ ಪಡೆಯಲಾದ ಪತ್ರಗಳಿಗೆ ಉತ್ತರವನ್ನು ನೀಡುತ್ತಾರೆ. ರಷ್ಯನ್ ಅನುವಾದಿತ ಪವಿತ್ರ ಖುರ್‌ಆನ್‌ನ 4ನೇ ಸಂಪುಟದ ಮರು ಪರಿಶೀಲನೆ ಮತ್ತು ಪ್ರೂಫ್ ರೀಡಿಂಗ್ ಕೆಲಸ ನಡೆಯುತ್ತಿದೆ. ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಮಲ್ಫೂಝಾತಿನ ಹತ್ತು ಸಂಪುಟಗಳ ವೆಬ್‌ಸೈಟ್ ಇದೆ. 2013 ರಲ್ಲಿ ರಷ್ಯನ್ ಭಾಷೆಯಲ್ಲಿ ಜಮಾಅತಿನ ವೆಬ್‌ಸೈಟ್ ಜಾರಿಗೆ ಬಂದಿತ್ತು. ಎಲ್ಲ ಜುಮಅ ಖುತುಬಗಳನ್ನು ಮತ್ತು ಇತರ ಭಾಷಣಗಳನ್ನು ರಷ್ಯನ್ ಅನುವಾದದಲ್ಲಿ ವಿಧಿವತ್ತಾಗಿ ಅಪ್‌ಲೋಡ್ ಮಾಡಲಾಗುತ್ತಿದೆ. ಅಲ್ಲದೇ ರಷ್ಯನ್ ಅನುವಾದಿತ ಗ್ರಂಥಗಳನ್ನು ಸಹ, ಅದರ ಜೊತೆ ಜೊತೆಯಲ್ಲಿಯೇ ಅಪ್‌ಲೋಡ್ ಮಾಡಲಾಗುತ್ತಿದೆ. ಪ್ರಸಕ್ತ ವರ್ಷ ಹತ್ತು ಸಾವಿರಕ್ಕಿಂತ ಹೆಚ್ಚು ಜನರು ಈ ವೆಬ್‌ಸೈಟ್‌ನ್ನು ವೀಕ್ಷಿಸಿದರು. ಫೇಸ್‌ಬುಕ್ ಮತ್ತು ಇನ್ಸ್‌ಟಾಗ್ರಾಂನಲ್ಲೂ 1.5 ಮಿಲಿಯನ್‌ಗಿಂತ ಹೆಚ್ಚಿನ ಜನರು ಗ್ಹುಣ ಮಾಡಿದರು. ಉಝ್‌ಬಿಕ್ ವೆಬ್‌ಸೈಟ್ ಇದೆ. ಅದರಲ್ಲೂ ಖುತುಬಗಳು ಮತ್ತು ಭಾಷಣಗಳು ಅಪ್‌ಲೋಡ್ ಮಾಡಲಾಗಿದೆ. ಅದಲ್ಲದೇ ಇತರ ಕಾರ್‍ಯಕ್ರಮ ನನ್ನ ಅಥವಾ ಜಮಾತಿನ ಕಾರ್ಯಕ್ರಮಗಳು ಸಹ ಇವೆ. ಖಿರ್‌ಗಿಝ್ ಭಾಷೆಯಲ್ಲೂ ಜಮಾಅತಿ ವೆಬ್‌ಸೈಟ್ ಇದೆ. ಈ ವೆಬ್‌ಸೈಟ್ ಮೂಲಕ ಖಿರ್‌ಗಿಸ್ತಾನ್ ಮತ್ತು ಲೋಕದ ವಿವಿಧ ದೇಶಗಳಲ್ಲಿ ಹರಡಿರುವ ಖಿರ್‌ಗಿಝ್ ಸಮುದಾಯದವರಿಗಾಗಿ ಇಸ್ಲಾಮ್ ಮತ್ತು ಅಹ್ಮದಿಅತ್‌ನ ಸಂದೇಶ ತಲುಪಿಸಲಾಗುತ್ತಿದೆ. ಪ್ರಸಕ್ತ ವರ್ಷ 2 ಲಕ್ಷ 29 ಸಾವಿರಕ್ಕಿಂತ ಹೆಚ್ಚಿನ ಜನರು ವೆಬ್‌ಸೈಟ್ ವೀಕ್ಷಿಸಿದರು. ಈ ವೆಬ್‌ಸೈಟ್‌ನಲ್ಲಿ ಒದಗಿಸಲಾದ ವಿಷಯಗಳಲ್ಲಿ ಪವಿತ್ರ ಖುರ್‌ಆನ್‌ನ 30 ಭಾಷೆಯ ತಿಲಾವತ್ (ಪಠಣ) ವಿಡಿಯೋ ಸಹಿತ ಅಪ್‌ಲೋಡ್ ಮಾಡಲಾಗಿದೆ. ಅದಲ್ಲದೇ ಬಹಳಷ್ಟು ಸಾಹಿತ್ಯವಿದೆ.

ಬಂಗ್ಲಾ ಡೆಸ್ಕ್: – ಒಖಿಂ ಮೇಲೆ ನಲವತ್ತು ಗಂಟೆಗಳ ಬಂಗ್ಲಾ ಖುತಜ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಯಿತು. ಆ ಮೂಲಕ ಈ ಕಾರ್ಯಕ್ರಮಗಳ ಫಲವಾಗಿ ಬಾಂಗ್ಲಾದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ 69 ಬೈಅತ್‌ಗಳಾದವು. ಬಾಂಗ್ಲಾ ಪವಿತ್ರ ಖುರ್‌ಆನ್‌ನ ಅನುವಾದದ ಮರುಪರಿಶೀಲನೆ ಕಾರ್ಯ ಜಾರಿಯಲ್ಲಿದೆ. ಸದ್ಯ 25ನೇ ಭಾಗದ ಮರು ಪರಿಶೀಲನೆ ನಡೆದಿದೆ. ಅದಲ್ಲದೇ ಹಲವು ಕಾರ್ಯಗಳನ್ನು ಬಾಂಗ್ಲಾ ಡೆಸ್ಕ್ ಕೈಗೆತ್ತಿಗೊಂಡಿದೆ.

ಚೀನಿ ಡೆಸ್ಕ್:– ಚೀನಿ ಡೆಸ್ಕ್ ಈ ವರ್ಷ Life of Muhammad ಮತ್ತು Ten proofs for the existence of God ಗ್ರಂಥಗಳ ಅನುವಾದ ಕಾರ್ಯ ಪೂರ್ಣಗೊಳಿಸಿದೆ. ಅದಲ್ಲದೇ ಬೇರೆ ಹಝ್ರತ್ ಮಸೀಹ್ ಮೌಊದ್(ಅ) ರವರ ಗ್ರಂಥಗಳೂ ಇವೆ. ಮತ್ತು ಬೇರೆ ಸಾಹಿತ್ಯವು ಸೇರಿದೆ. ಅದು ಸಹ ಸುಮಾರು ಮಟ್ಟಿಗೆ ತಯಾರಿದೆ ಮತ್ತು ಮುದ್ರಣಕ್ಕಾಗಿ ಕಳುಹಿಸಲಾಗುವುದು.

ಇಂಡೋನೇಷಿಯನ್ ಡೆಸ್ಕ್ :– ಇಂಡೋನೇಷಿಯನ್ ಭಾಷೆಯಲ್ಲಿ ಈಗ ಜುಮಅ ಖುತುಬ Live ಅನುವಾದ ಮಾಡಲಾಗುತ್ತಿದೆ. ಅದಲ್ಲದೇ ಪ್ರಸಕ್ತ ವರ್ಷ 2020 ಕಾರ್ಯಕ್ರಮಗಳ ಅನುವಾದ ಸಿದ್ಧಗೊಂಡಿದೆ. ಪ್ರಸಕ್ತ ವರ್ಷ ಹಝ್ರತ್ ಮಸೀಹ್ ಮೌಊದ್(ಅ) ರವರ ಗ್ರಂಥಗಳ ಹಾಗೂ ಇತರ ಸಾಹಿತ್ಯಗಳ ಅನುವಾದ ಮಾಡಲಾಗಿದೆ. ಅತ್ಮಾಮುಲ್ ಹುಜ್ಜ, ಸಿರಾಜೆ ಮುನೀರ್, ಮಲ್ಫೂಝಾತ್ ಸಂಪುಟ 2, ಸಚ್ಚಯಿ ಕಾ ಇಝ್‌ಹಾರ್ ಮತ್ತಿತರ ಸಾಹಿತ್ಯಗಳು.

ಸವಾಹೇಲಿ ಡೆಸ್ಕ್ :– ಇದು ಸಹ ಯು.ಕೆಯಲ್ಲಿ ಅಧಿಕೃತವಾಗಿ ಸ್ಥಾಪನೆಯಾಗಿದೆ. ಒಖಿಂ ಆಫ್ರಿಕಾದಲ್ಲಿ ಪ್ರಸಾರಗೊಳ್ಳುವ ಎಲ್ಲ ಕಾರ್ಯಕ್ರಮಗಳನ್ನು

ಸವಾಹೇಲಿ ಭಾಷೆಯಲ್ಲಿ ಅನುವಾದ ಮಡಲಾಗುತ್ತಿದೆ. ಒಖಿಂ ಆಫ್ರಿಕಾಗೋಸ್ಕರ ಸವಾಹೇಲಿ ಭಾಷೆಯಲ್ಲಿ ಪವಿತ್ರ ಖುರ್‌ಆನ್‌ನ ಅನುವಾದ ರೆಕಾರ್ಡ್ ಮಾಡಲಾಗುತ್ತಿದೆ. ಪ್ರಸಕ್ತ ವರ್ಷ 15 ಭಾಗಗಳ ಅನುವಾದ ಪೂರ್ಣಗೊಂಡಿದೆ. ಅದಲ್ಲದೇ ಹಝ್ರತ್ ಮಸೀಹ್ ಮೌಊದ್(ಅ) ರವರ ಗ್ರಂಥಗಳ ಅನುವಾದ ಕಾರ್ಯಕ್ರಮವು ನಡೆಯುತ್ತಿದೆ.

ಸ್ಪಾನಿಷ್ ಡೆಸ್ಕ್ :– ಕೇಂದ್ರೀಯ ಸ್ಪಾನಿಷ್ ಡೆಸ್ಕ್ ಆರಂಭವಾದಾಗಿನಿಂದ ಸ್ಪೇನ್‌ನಲ್ಲಿಯೇ ಸ್ಥಾಪನೆಗೊಂಡಿದೆ ಮತ್ತು ಅಲ್ಲಿಂದಲೇ ಕೇಂದ್ರದ ನೇರ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಗ್ರಂಥಗಳ ಅನುವಾದದ ಕಾರ್ಯ ಅವರು ಪೂರ್ಣಗೊಳಿಸಿದ್ದಾರೆ. ಇನ್‌ಶಾಅಲ್ಲಾಹ್ ಅತಿ ಶೀಘ್ರವಾಗಿ ಮುದ್ರಣಕ್ಕೆ ಕಳುಹಿಸಲಾಗುವುದು. ಅದಲ್ಲೇ ಇನ್ನೂ ಹಲವು ಕಾರ್ಯಗಳನ್ನು ಅವರು ಮಾಡಿದ್ದಾರೆ ಮತ್ತು ಉತ್ತಮ ರೀತಿಯಲ್ಲಿ ಮಾಡುತ್ತಿದ್ದಾರೆ. ಸ್ಪಾನಿಷ್ ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಮಾಸಿಕವಾಗಿ 22 ಸಾವಿರ ಜನರು ಇತ್ತೀಚೆಗೆ ವೀಕ್ಷಿಸುತ್ತಿದ್ದಾರೆ. ರಂಝಾನ್ ತಿಂಗಳಿನಲ್ಲಿ ಈ ಸಂಖ್ಯೆ 42 ಸಾವಿರ ಆಗಿತ್ತು. ಅದಲ್ಲದೇ ಫೇಸ್‌ಬುಕ್ ಮೇಲೆ ಹಲವು Article ಬರೆಯಲಾಗಿತ್ತು. ಆ ಮೂಲಕ ಸಾವಿರಾರು ಸ್ಪಾನಿಷ್ ಜನರಿಗೆ ಈ ಸಂದೇಶ ತಲುಪಿತು. ವಿವಿಧ ಶೀರ್ಷಿಕೆಯ ಮೇಲೆ ವೀಡಿಯೋಗಳು ತಯಾರು ಮಾಡಿ ವೆಬ್‌ಸೈಟ್‌ನಲ್ಲಿ ಹಾಕಲಾಯಿತು. ಅದರಿಂದ ಸಂಪರ್ಕ ಬೆಳೆಯತೊಡಗಿದೆ. ಬ್ರಾಜೀಲ್‌ನಿಂದ ಒಬ್ಬ ಮಿತ್ರ ವೆಬ್‌ಸೈಟ್ ಮೂಲಕ ಸಂಪರ್ಕದಲ್ಲಿದ್ದ ನಂತರ ಅವರು ಬೈಅತ್ ಮಾಡಿದನು. ಅದೇ ರೀತಿ ಅರ್‌ಜಂಟಯಿನ್‌ನ ಓರ್ವ ಪತ್ರಿಕೋದ್ಯಮಿಯೊಡನೆ ಸಂಪರ್ಕ ಸಾಧಿಸಲಾಯಿತು. ಅವನು ತನ್ನ ಪತ್ರಿಕೆಯಲ್ಲಿ ಜಮಾಅತಿನ ಪರವಾಗಿ ಬಹಳ ಒಳ್ಳೆಯ Article ಬರೆದನು.

ತಹ್ರೀಕ್ ವಕ್ಫೆ ನೌ: ಈ ಇಲಾಖೆಯು ಈಗ ಸಾಕಷ್ಟು ವ್ಯವಸ್ಥಿತವಾಗಿದೆ. ಅಲ್ಲಾಹನ ಅನುಗ್ರಹದಿಂದ ಲೋಕದಾದ್ಯಂತ ವಾಖಿಫೀನ್ ನೌಗಳ ಒಟ್ಟು ಸಂಖ್ಯೆ 72 ಸಾವಿರ 932 ಆಗಿವೆ. ಅದರಲ್ಲಿ 43,281 ಹುಡುಗರು ಹಾಗೂ 27,994 ಹುಡುಗಿಯರಿದ್ದಾರೆ. ಈ ವರ್ಷ ಹೊಸದಾಗಿ ಸೇರಿದ ವಾಖಿಫೀನ್ ನೌ ಅವರ ಸಂಖ್ಯೆ 3,994 ಆಗಿದೆ. 15 ವರ್ಷಕ್ಕಿಂತ ಮೇಲ್ಪಟ್ಟ ವಾಖಿಫೀನ್ ನೌಗಳ ಸಂಖ್ಯೆ 32,319 ಆಗಿದೆ. ಅದರಲ್ಲಿ ಹುಡುಗರು 20,920 ಮತ್ತು ಹುಡುಗಿಯರು, 11,399. ಈ ವರದಿಯನ್ವಯ ಹೊಸದಾಗಿ ವಕ್ಫೆನೌ ಸೇರಲು ಬಂದ ಅರ್ಜಿಗಳಿವೆ. ಅದರ ಒಟ್ಟು ಸಂಖ್ಯೆ 15 ಸಾವಿರಕ್ಕಿಂತ ಹೆಚ್ಚಾಗಿವೆ. ವಾಖಿಫೀನ್ ನೌ ಇರುವ ದೊಡ್ಡ ದೊಡ್ಡ ದೇಶಗಳೆಂದರೆ, ಮೊದಲನೆಯದಾಗಿ ಪಾಕಿಸ್ತಾನ ಅಲ್ಲಿ 34 ಸಾವಿರಕ್ಕಿಂತ ಅಧಿಕವಿದೆ. ಜರ್ಮನಿಯಲ್ಲಿ 9 ಸಾವಿರಕ್ಕಿಂತ ಹೆಚ್ಚಿದೆ. ಯು.ಕೆ ಯಲ್ಲಿ 6 ಸಾವಿರಕ್ಕಿಂತ ಹೆಚ್ಚು, ಇಂಡಿಯಾದಲ್ಲಿ 4 ಸಾವಿರಕ್ಕಿಂತ ಹೆಚ್ಚು, ಕೆನಡಾದಲ್ಲಿ 4 ಸಾವಿರಕ್ಕಿಂತ ಹೆಚ್ಚು, ಅದಲ್ಲದೇ ಎಲ್ಲ ದೇಶಗಳಲ್ಲಿಯೂ ಇದೆ. ದೊಡ್ಡ ಸಂಖ್ಯೆ ಮಾತ್ರ ನಾನು ಇಲ್ಲಿ ಒದಗಿಸಿದ್ದೇನೆ.

ಅಲ್ ಇಸ್ಲಾಮ್ ವೆಬ್‌ಸೈಟ್: ಸದ್ಯ 310 ಇಂಗ್ಲೀಷ್ ಗ್ರಂಥಗಳು ಮತ್ತು ಒಂದು ಸಾವಿರ ಉರ್ದು ಗ್ರಂಥಗಳನ್ನು ವೆಬ್‌ಸೈಟ್ ಮೇಲೆ ಹಾಕಲಾಗಿದೆ. ಪ್ರಸಕ್ತ ವರ್ಷ 12 ಹೊಸ ಇಂಗ್ಲೀಷ್ ಪುಸ್ತಕಗಳು (Apple), Google ಮತ್ತು Amazon ಮೇಲೆ ಬಿತ್ತರಗೊಂಡಿದೆ. ಹೀಗೆ ಈ ವೇದಿಕೆಯ ಮೇಲೆ ಇರುವ ಪುಸ್ತಕಗಳ ಸಂಖ್ಯೆ 66 ಆಗಿವೆ. ಅಂತೂ ಬಹಳಷ್ಟು ವಿಷಯಗಳನ್ನು, "ಅಲ್–ಇಸ್ಲಾಮ್" ನಲ್ಲಿ ಹಾಕಲಾಗಿದೆ ಮತ್ತು ಅವರ Team ಬಹಳ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿದೆ. ಸ್ವಯಂಸೇವಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಮಯ ಸಮಯಕ್ಕೆ ಹೊಸ ಹೊಸ ಕಾರ್ಯಕ್ರಮಗಳನ್ನು ಪರಿಚಯಿಸುತ್ತಿದ್ದಾರೆ.

Review of Religions: ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಇದನ್ನು ಜಾರಿಗೆ ತಂದಿದ್ದರು. ಇದರ ಪ್ರಥಮ ಸಂಚಿಕೆ ಜನವರಿ 1902 ರಲ್ಲಿ ಮುದ್ರಣಗೊಂಡಿತ್ತು. ಅಲ್ಲಾಹನ ಅನುಗ್ರಹದಿಂದ ಈ ಪತ್ರಿಕೆಗೆ ಈಗ 118 ವರ್ಷವಾಗಿವೆ. ಈ ಪತ್ರಿಕೆ ಇಂಗ್ಲೀಷ್, ಫ್ರೆಂಚ್, ಸ್ಪಾನಿಷ್ ಮತ್ತು ಜರ್ಮನಿ ಭಾಷೆಗಳಲ್ಲಿ ಬಿತ್ತರಗೊಳ್ಳುತ್ತಿದೆ. ಪ್ರತಿಯೊಂದು ಭಾಷೆಯಲ್ಲಿಯೂ ಖಜತುಜತಿ ನ ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮದ ಚಾನಲ್‌ಗಳಿವೆ. ಇಂಗ್ಲೀಷ್ ಪತ್ರಿಕೆ ಮಾಸಿಕವಾಗಿದೆ. ಬೇರೆ ಉಳಿದ ಭಾಷೆಗಳಲ್ಲಿ ಪತ್ರಿಕೆಯು ತ್ರೈಮಾಸಿಕವಾಗಿದೆ. ಅದಲ್ಲದೇ ಪ್ರತಿವಾರ Online ವಿಷಯ ಬಿತ್ತರಗೊಳ್ಳುತ್ತಿದೆ.

Review of Religions ಇಂಗ್ಲೀಷ್ ಭಾಷೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಸಂದೇಶ ತಲುಪಿಸುವುದರಲ್ಲಿ ಬಹಳ ಮುಖ್ಯ ಪಾತ್ರ ವಹಿಸಿದೆ. ಅದೇ ರೀತಿ ಈಗ ಜರ್ಮನ್ ಮತ್ತು ಸ್ಪಾನಿಷ್ ಜನರಲ್ಲಿಯೂ ಈ ಸಂದೇಶ ತಲುಪುತ್ತಿದೆ.

ಸಾಮಾಜಿಕ ಮಾಧ್ಯಮ ಮೂಲಕ Review of Religious ಬಹು ದೊಡ್ಡ ಪಾತ್ರ ನಿರ್ವಹಿಸುತ್ತಿದೆ. ಅದರಲ್ಲಿ Twitter, Facebook, Instagram ಸೇರಿವೆ. ಹಿಂದಿನ ವರ್ಷ 5 ಮಿಲಿಯನ್‌ಗಿಂತ ಹೆಚ್ಚಿನ ಜನರು ಇದರ ಉಪಯೋಗ ಪಡೆದರು. ಸಾಮಾಜಿಕ ಮಾಧ್ಯಮದಿಂದ ಈ ವರ್ಷ ಹೊಸ ಯೋಜನೆಯನ್ವಯ ಪ್ರತಿದಿನ ಅಥವಾ ಪ್ರತಿ ಎರಡನೇ ದಿನ ಪ್ರಬಂಧಗಳು ಬಿತ್ತರಗೊಳ್ಳುತ್ತಿವೆ. ಇನ್ನು ಒಂದು ಗೋಚರವಾದ ಸಂಗತಿ ಏನೆಂದರೆ ಲಾಕ್‌ಡೌನ್ ನಡುವೆ ಜನರ ಆನ್‌ಲೈನ್‌ನಲ್ಲಿ ವಿಷಯಗಳನ್ನು ಅಧ್ಯಯನ ಮಾಡುವ ಹವ್ಯಾಸ ಮೊದಲಿಗಿಂತ ಹೆಚ್ಚಾಗಿದೆ. ಈ ಅವಧಿಯಲ್ಲಿ 120 ಪ್ರಬಂಧಗಳನ್ನು ಆನ್‌ಲೈನ್ ಮೇಲೆ ಬಿತ್ತರಿಸಲಾಗಿದೆ.

Review of Religious ನ ಒಂದು ಯೂಟ್ಯೂಬ್ ಚಾನಲ್ ಇದೆ. ಅದಕ್ಕೆ 70,000 ಜನರು Subscribe ಮಾಡಿದ್ದಾರೆ. ಕೇವಲ ಕಳೆದ ವರ್ಷ ಮಾತ್ರ ನಮ್ಮ ವಿಡಿಯೋಗಳನ್ನು 1.7 ಮಿಲಿಯನ್ ಸಲ ನೋಡಲಾಗಿದೆ.

ಅಲ್–ಫಝಲ್ International: ಇದರ ಉದ್ಘಾಟನೆ 1994 ರಲ್ಲಿ ಸಾಪ್ತಾಹಿಕ ರೂಪದಲ್ಲಾಗಿತ್ತು. ಈಗ ಅಲ್ಲಾಹನ ಅನುಗ್ರಹದಿಂದ 27 ಮೇ 2019 ರಿಂದ ವಾರದಲ್ಲಿ ಎರಡು ದಿನ, ಶುಕ್ರವಾರ ಮತ್ತು ಮಂಗಳವಾರದಂದು ಪ್ರಕಟವಾಗುತ್ತಿದೆ. ಮತ್ತು ತುಂಬ ಒಳ್ಳೆಯ, ಸುಂದರವಾದ ಸಂಚಿಕೆಯ ರೂಪದಲ್ಲಿ ಬಿತ್ತರವಾಗುತ್ತಿದೆ.

ಅಲ್‌ಹಕಮ್: ಇಂಗ್ಲೀಷ್ ಪತ್ರಿಕೆಯಾಗಿದೆ. ನಿಯಮಿತವಾಗಿ ಇದು ಸಾಪ್ತಾಹಿಕ ರೂಪದಲ್ಲಿ ಪ್ರಕಟವಾಗುತ್ತಿದೆ. ಕೋರೋನ ವೈರಸ್ ಕಾರಣ ಲಾಕ್‌ಡೌನ್ ನಡುವೆ ಅದರ ಓದುಗರ ಸಂಖ್ಯೆಯಲ್ಲಿ ಅಸಾಮಾನ್ಯ ಹೆಚ್ಚಳ ಕಂಡು ಬಂದಿದೆ.

ಪತ್ರಿಕೆಗಳಲ್ಲಿ ಜಮಾಅತಿನ ಸಮಾಚಾರಗಳು ಹಾಗೂ ಪ್ರಬಂಧಗಳ ಪ್ರಚಾರ ವರದಿಗಳ ಪ್ರಕಾರ ಲೋಕದ ಇತರ ಪತ್ರಿಕೆಗಳು ಜಮಾಅತಿನ ಸಮಾಚಾರಗಳನ್ನು ಮತ್ತು ಪ್ರಬಂಧಗಳನ್ನು ಪ್ರಕಟ ಪಡಿಸುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಸ್ವೀಕೃತಿಯ ಒಂದು ಗಾಳಿ ಬೀಸಿದಂತಾಗಿದೆ. ಅದರ ಫಲವಾಗಿ ಮಾಧ್ಯಮಗಳು ಜಮಾಅತಿನ ವಿಷಯದಲ್ಲಿ ಒಲವು ತೋರುತ್ತಿದ್ದಾರೆ. ಒಟ್ಟಿನಲ್ಲಿ 2,544 ಪತ್ರಿಕೆಗಳು 12,453 ಜಮಾಅತಿನ ಪ್ರಬಂಧಗಳನ್ನು ಂಡಿಣುಛಿಟಜ ಮತ್ತು ಸಾಮಾಚಾರಗಳನ್ನು ಪ್ರಕಟಪಡಿಸಿದ್ದಾರೆ. ಈ ಪತ್ರಿಕೆಗಳ ಓದುಗರ ಒಟ್ಟು ಸಂಖ್ಯೆ 52 ಕೋಟಿಗಿಂತಲೂ ಹೆಚ್ಚಾಗಿದೆ.

ಪ್ರೆಸ್ ಮತ್ತು ವೀಡಿಯೋ ಇಲಾಖೆ: ಪ್ರಸಕ್ತ ವರ್ಷ ಅಲ್ಲಾಹನ ಅನುಗ್ರಹದಿಂದ ಪ್ರೆಸ್ ಮತ್ತು ವೀಡಿಯೋ ತಂಡದವರಿಗೆ ಹಲವು ಯೋಜನೆಗಳ ಮೇಲೆ ಕಾರ್ಯ ಮಾಡುವ ಭಾಗ್ಯ ದೊರೆತಿದೆ. ಅದರಿಂದ ಭಾರಿ ಸಂಖ್ಯೆಯಲ್ಲಿ ಜಮಾಅತಿನ ಸಂದೇಶ ತಲುಪಿದೆ. ವಿವಿಧ ಶೀರ್ಷಿಕೆಗಳ ಮೇಲೆ ಸಂದೇಶಗಳನ್ನು ಹಂಚಿಕೊಳ್ಳಲಾಯಿತು. ಆ ಮೂಲಕ 31 ಲಕ್ಷಕ್ಕಿಂತ ಹೆಚ್ಚಿನ ಜನರಿಗೆ ಸಂದೇಶ ತಲುಪಿತು. ಪ್ರೆಸ್ ಮೀಡಿಯಾ ಇಲಾಖೆ ಹಲವು ಪತ್ರಿಕೋದ್ಯಮಿಗಳಿಗೆ ಮಸೀದಿಗಳಲ್ಲಿ ಆಹ್ವಾನಿಸಲಾಯಿತು. ಪ್ರಸಕ್ತ ವರ್ಷ ಕೆಲವು ಕ್ಯಾತ ಪತ್ರಿಕೋದ್ಯಮಗಳ ಸಹಿತ ಸುಮಾರು 100 ಪತ್ರಕರ್ತರು ಮಸೀದಿಗಳಿಗೆ ಭೇಟಿ ನೀಡಿದರು. ಪ್ರೆಸ್ ಮತ್ತು ಮೀಡಿಯಾ ಇಲಾಖೆ ಭಾರತದಿಂದ ಕೋರೋನ ವೈರಸ್ ಬಗ್ಗೆ ಒಂದು ಬಹುಮೂಲ್ಯ ಪ್ರಬಂಧ ಪ್ರಕಟಗೊಳಿಸಲಾಗಿದೆ. ಅದನ್ನು ಮಾಧ್ಯಮದಲ್ಲಿ ಪ್ರಚಾರ ಮಾಡಲಾಯಿತು. ಅದರ ಬಗ್ಗೆ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಅಲ್ಲಿಯ ಕೋಶಲ್ ಸಾಹಿಬ್ Advocate ಬರೆದರು. ಈ ವಿಷಯ ಓದಿದ ನಂತರ ಯಾರಿಗೂ ಹೇಳಲು ಸಾಧ್ಯವಿಲ್ಲ. ನಿಝಾಮುದ್ದೀನ್‌ನಲ್ಲಿ ನಡೆದ ಘಟನೆಗೆ (ಅಲ್ಲಿಯ ಒಂದು ಸ್ಥಳದಲ್ಲಿ ತಬ್ಲೀಗಿ ಜಮಾಅತಿನ ಘಟನೆ ನಡೆದಿತ್ತು. ಭಾರತದಲ್ಲಿ ಅದರ ಮೇಲೆ ತುಂಬ ಚರ್ಚೆಗಳು ನಡೆಯುತ್ತಿದ್ದವು) ಇಸ್ಲಾಮ್‌ನೊಂದಿಗೆ ಅಥವಾ ಅಹ್ಮದಿಯಾ ಜಮಾಅತಿನೊಂದಿಗೆ ಯಾವುದೇ ಸಂಬಂಧವಿದೆ ಎಂದು. ಇದು ನಿಜ ಅರ್ಥದಲ್ಲಿ ಜನರ ಅಲಕ್ಷ್ಯತನ ಮತ್ತು ತಪ್ಪು ಕಲ್ಪನೆಗಳಾಗಿವೆ. ಇಸ್ಲಾಮ್ ಧರ್ಮವಂತು ಪ್ರಾರಂಭದಿಂದಲೇ ಸಾಂಕ್ರಾಮಿಕ ರೋಗಗಳ ಬಗ್ಗೆ ಎಚ್ಚರಿಕೆ ನೀಡಿದೆ. ಮತ್ತು ಹೇಳುತ್ತಾರೆ. ಈ ಪ್ರಬಂದ ಬಹಳ ಉತ್ತಮವಾಗಿದೆ. ಸಮಯೋಚಿತವಾಗಿದೆ. ಇದರ ಬಹಳ ಒಳ್ಳೆಯ ಪರಿಣಾಮಗಳು ಹೊರ ಬರುವುದು ಎಂದು ನಾನು ಆಶಿಸುತ್ತೇನೆ.

ಶೋಬ ಮಕ್ಝನ್ ತಸಾವೀರ್: ತೌಹಿರ್ ಹೌಸ್‌ನಲ್ಲಿ ಇದರ ಕಚೇರಿ ಇದೆ. ಮತ್ತು ಪ್ರದರ್ಶನವು (Exhibition) ಇದೆ. ಯಾವ ಮಟ್ಟದಲ್ಲಿ ವೀಕ್ಷಕರ ಬರುವಿಕೆಯನ್ನು ನಿರೀಕ್ಷಿಸಿದ್ದೆವು. ನನ್ನ ವರದಿ ಅನ್ವಯ ಆ ಮಟ್ಟಕ್ಕೆ ತಲುಪಲಿಲ್ಲ. ವೀಕ್ಷಕರ ಸಂಖ್ಯೆ ಹೆಚ್ಚಾಗಬೇಕಾಗಿದೆ. ಜನರಿಗೆ ಅ ಜಮಾಅತಿನ ಇತಿಹಾಸ ತಿಳಿಯುವಂತಾಗಬೇಕು. ಪ್ರಸಕ್ತ ವರ್ಷ ಇಲ್ಲಿಯತನಕ ಸುಮಾರು 25 ದೇಶಗಳಿಂದ 913 ಜನರು ಪ್ರದರ್ಶನ (Exhibition) ವೀಕ್ಷಿಸಿದ್ದಾರೆ. ಇದು ತೀರ ಕಡಿಮೆ ಸಂಖ್ಯೆಯಾಗಿದೆ. ಈ ಪ್ರದರ್ಶನವನ್ನು ವಿಧಿಬದ್ಧವಾಗಿ ಅಪ್‌ಲೋಡ್ ಮಾಡಲಾಗುತ್ತಿದೆ.

ಅಹ್ಮದಿಯಾ ಆರ್ಕೈವ್‌ಝ್ (Archives) ಮತ್ತು Research Center:– ಈ ಇಲಾಖೆಯನ್ವಯ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಮತ್ತು ಅಹ್ಮದಿಯಾ ಖಲೀಫರುಗಳ ಚಿರಸ್ಮರಣೆಯನ್ನು ಸುರಕ್ಷಿತವಾಗಿರಿಸುವ ಕಾರ್ಯ ಜಾರಿಯಲ್ಲಿದೆ. ಅಹ್ಮದಿಯಾ ಜಮಾಅತಿನ ಬಗ್ಗೆ ಸಂಶೋಧನೆ ನಡೆಸುತ್ತಿರುವ ಪಾಶ್ಚಿಮಾತ್ಯ ಸಂಶೋಧಕರು ಇದರ

ಸಂಪರ್ಕದಲ್ಲಿದ್ದಾರೆ. ಅವರಿಗೆ ಸಾಕ್ಷ್ಯಾಧಾರಿತ ಮಾಹಿತಿಗಳನ್ನು ಒದಗಿಸುತ್ತಿದ್ದಾರೆ. ಅಲ್ಲದೇ ಜಮಾಅತಿನ ಇತಿಹಾಸ ರೆಕಾರ್ಡ್ ಮೂಲಕ ಅವರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಮತ್ತು ಅವರು ಚೆನ್ನಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ತುಂಬ ಒಳ್ಳೆಯ ಮಾಹಿತಿಗಳನ್ನು ಕಲೆ ಹಾಕುತ್ತಿದ್ದಾರೆ.

ಒಖಿಂ ಆಫ್ರಿಕಾ: ಆಗಸ್ಟ್ 2016 ರಲ್ಲಿ MTA ಆಫ್ರಿಕಾ ಜಾರಿಗೆ ಬಂದಿತ್ತು. ಅಲ್ಲಾಹನ ಅನುಗ್ರಹದಿಂದ ಇನ್ನೂ ಅಧಿಕ ವಿಸ್ತೃತ ರೂಪ ತಾಳುತ್ತಿದೆ. ಅದರ ಮೂಲ ದೂರ ದೂರದ ಕ್ಷೇತ್ರಗಳ ಸ್ಥಳೀಯ ಭಾಷೆಗಳಲ್ಲಿ ಸಂದೇಶ ತಲುಪುತ್ತಿದೆ. ಸದ್ಯ MTA ಆಫ್ರಿಕಾದ ಎರಡು ಚಾನಲ್ ವಿಭಿನ್ನ ಭಾಷೆಗಳಲ್ಲಿ ಎಲ್ಲ ಸಮಯ ಪ್ರಸಾರ ಮಾಡುತ್ತಿದ್ದಾರೆ. ಪ್ರಸಕ್ತ ವರ್ಷ ವಿವಿಧ Studio ಗಳಲ್ಲಿ ಯೂರೋಪ್, ಹೌಸಾ, ಚೂಯಿ, ಸವಾಹೇಲಿ, ಫ್ರೆಂಚ್ ಮತ್ತು ಕರ್‌ಮೋಲ್ ಭಾಷೆಗಳಲ್ಲಿ 6 ನೂರಕ್ಕಿಂತ ಹೆಚ್ಚು ಕಾರ್ಯಕ್ರಮಗಳನ್ನು ಸಿದ್ಧಪಡಿಸಿದ್ದಾರೆ. ಘಾನಾದಲ್ಲಿಯೂ ಬಹಳ ಒಳ್ಳೆಯ Studio ನಿರ್ಮಿಸಲಾಗಿದೆ. ಅದರ ಹೆಸರು "ವಹಾಬ್ ಆದಂ Studio ಎಂದಾಗಿದೆ. ಹಲವು Live ಕಾರ್ಯಕ್ರಮಗಳು ಬಿತ್ತರಗೊಂಡವು. ಆಫ್ರಿಕಾದಲ್ಲಿ ಮೊದಲ ಬಾರಿಗೆ ಪವಿತ್ರ ಖುರ್‌ಆನ್‌ನ ತಿಲಾವತ್ತಿನ ಸ್ಪರ್ಧೆ ವಹಾಬ್ ಆದಂ Studio ದಿಂದ ಬಿತ್ತರಿಸಲಾಯಿತು.

ಗೆಂಬಿಯಾದಲ್ಲಿ ಟಿ.ವಿ ಚಾನಲ್ ಮತ್ತು Studio ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಯಿತು. ಪ್ರಸಕ್ತ ವರ್ಷ MTA ಆಫ್ರಿಕಾ ಗೆಂಬಿಯಾದಲ್ಲಿ ಒಂದು Studio ದ ಕೆಲಸ ಪೂರ್ಣಗೊಳಿಸಿತು. ಅಲ್ಲಿ ಈಗ ಒಂದು ಚಾನಲ್‌ನ ಮೂಲಕ 24 ಗಂಟೆಯ ಪ್ರಸಾರ ಪ್ರಸ್ತುತಪಡಿಸಲಾಯಿತು. ಹಲವು ರಾಜಕೀಯ ಮತ್ತು ಶಿಕ್ಷಿತ ವ್ಯಕ್ತಿಗಳು ಒಖಿಂ ಗಳನ್ನು ವಿಶೇಷವಾಗಿ ವೀಕ್ಷಿಸುತ್ತಿದ್ದಾರೆ.

ಮುಬಲ್ಲೀಗ್ ಇನ್‌ಚಾರ್ಜ್ ಕೆಮರೂನ್ ಬರೆಯುತ್ತಾರೆ. ಅಲ್ಲಾಹನ ಅನುಗ್ರಹದಿಂದ ಕೆಮರೂನಿನ ಸಣ್ಣ ದೊಡ್ಡ ನಗರಗಳಲ್ಲಿ MTA ಮೂಲಕ ಕೆಮರೂನಿನ 10 ಮಿಲಿಯನ್‌ಗಿಂತ ಹೆಚ್ಚಿನ ಜನರಿಗೆ ಅಹ್ಮದಿಯತ್ತಿನ ಸಂದೇಶ ತಲುಪುತ್ತಿದೆ. ಕೆಮರೂನಿನಲ್ಲಿ MTA ಇಂಗ್ಲೀಷ್ ಮತ್ತು ಫ್ರೆಂಚ್ ಎರಡೂ ಭಾಷೆಗಳಲ್ಲಿ ವೀಕ್ಷಿಸುತ್ತಿದ್ದಾರೆ. ಉತ್ತರದ ಮೂರು ವಲಯಗಳಲ್ಲಿ ಮುಸ್ಲಿಮರ ಸಂಖ್ಯೆ ಯಥೇಚ್ಛವಾಗಿದೆ. ಆದುದರಿಂದ ಉಲಮಾ (ಮತಪಂಡಿತರು) MTA ಅಲ್‌ಅರೆಬಿಯಾ ತುಂಬ ಆಸಕ್ತಿಯಿಂದ ಆಲಿಸುತ್ತಿದ್ದಾರೆ ಮತ್ತು ಜನರಲ್ಲಿ ಜಾಗೃತಿ ಉಂಟಾಗುತ್ತಿದೆ.

ಅಮೀರ್ ಸಾಹಿಬ್ ತನ್‌ಝೂನಿಯಾ ಬರೆಯುತ್ತಾರೆ, ಡಿಸೆಂಬರ್ 2019ರಲ್ಲಿ ಮೋಷ (Moshi) ವಲಯದ ನಮ್ಮ ಇಬ್ಬರು ಮುಅಲ್ಲಿಮೀನ್ ತಬ್ಲೀಗ್ ಕಾರ್ಯ ನಿಮಿತ್ತ ನಗರದಿಂದ ಸುಮಾರು 70 ಕಿ.ಮೀ ದೂರದಲ್ಲಿರುವ ಒಂದು ಊರಿಗೆ ಹೋದರು ಮತ್ತು ಮನೆ ಮನೆಗೆ ಹೋಗಿ ತಬ್ಲೀಗ್ ಮಾಡತೊಡಗಿದರು. ಒಬ್ಬ ಕ್ಷೌರಿಕನ ಅಂಗಡಿಯಲ್ಲಿ ಅವರು ನೋಡಿದರು. ಟಿ.ವಿಯ ಮೇಲೆ MTA ಆಫ್ರಿಕಾದ ಪ್ರಸಾರಗಳು ಜಾರಿಯಲ್ಲಿವೆ. ಅವರು ಆ ಅಂಗಡಿಯ ಮಾಲೀಕನಿಗೆ ಕೇಳಿದರು. ನೀವು ಅಹ್ಮದಿಯರೇ? ಅವನು ಉತ್ತರಿಸಿದ: ನಾನು ಅಹ್ಮದಿಯಲ್ಲ. ಆದರೆ ಪಗಡಿ ದರಿಸಿದ ಆ ವ್ಯಕ್ತಿ ಅವರ ಖುತುಬ ಬರುತ್ತದೆ ಮತ್ತು MTA ಮೇಲೆ ಬರುವ ಇತರ ಕಾರ್ಯಕ್ರಮಗಳು ತುಂಬ ಒಳ್ಳೆಯ ಹಾಗೂ ಆಧ್ಯಾತ್ಮಿಕವಾಗಿರುತ್ತದೆ, ಜ್ಞಾನಭರಿತವಾಗಿರುತ್ತದೆ. ಅದನ್ನು ನಾನು ಚೆನ್ನಾಗಿ ಆಲಿಸುತ್ತೇನೆ. ಆದುದರಿಂದ ಈ ಇಸ್ಲಾಮಿ ಚಾಲನ್ ನನಗೆ ತುಂಬ ಮೆಚ್ಚುಗೆಯಾಗಿದೆ. ಅನಂತರ ನಾವು ಅವನ ಮನೆಗೆ ಹೋಗಿ ನಮ್ಮ ಮುಅಲ್ಲಿಮೀನ್ ಇಸ್ಲಾಮ್ ಅಹ್ಮದಿಯತ್ತಿನ ಸಂದೇಶ ತಲುಪಿಸಿದರು. ಆ ಅಹ್ಮದಿಯರು ಸಹ ನೆನಪಿಡಬೇಕು. MTA ಅನ್ನು ಲಕ್ಷ್ಯವಹಿಸಿ ನೋಡುವುದಿಲ್ಲ. ಬಹುಶಃ ವಾರದಲ್ಲಿ ಒಂದು ದಿನ MTA ಕೇಳುತ್ತಾರೆ. ಅವರೂ ಕೇಳಿದರೆ MTA ಮೂಲಕ ಅವರ ಜ್ಞಾನ ವೃದ್ಧಿಯಾಗುವುದು. ಮತ್ತು ಆಧ್ಯಾತ್ಮಿಕ ದಾಹ ಅರಿಯಬಹುದಾಗಿದೆ. ಮನೆಗಳಲ್ಲಿ ಸಹ ತರಬೇತಿಯ ಒಳ್ಳೆಯ ವಾತಾವರಣ ಮೂಡಿಸಬಹುದಾಗಿದೆ.

ಇತ್ತೀಚೆಗೆ ಕೋರೋನ ಕಾರಣದಿಂದಾಗಿ ವಿಭಿನ್ನ ವರದಿಗಳು ಬರುತ್ತಿವೆ. ಅದರಿಂದ ತಿಳಿದು ಬರುತ್ತದೆ. MTA ಕಡೆ ಈಗ ಹೆಚ್ಚು ವಾಲುತ್ತಿದ್ದಾರೆ. ಎಲ್ಲರೂ ಒಟ್ಟು ಸೇರಿ ಆಲಿಸುತ್ತಿದ್ದಾರೆ. ಸ್ವಲ್ಪ ಸಮಯಕ್ಕೆ ಆದರೂ ಸರಿ. ಆದರೆ ಪರಿಸ್ಥಿತಿಗಳು ಬದಲಾದಾಗಲೂ ಆ ಕಡೆ ಗಮನಹರಿಸುವ ಅಗತ್ಯವಿದೆ.

ಬೋರಕೇನಾ ಫಾಸೋ ವಲಯದ ದೋಗೋವಿನಲ್ಲಿ ಒಂದು ಜಮಾಅತ್ ಇದೆ. ಅಲ್ಲಿಯ ಮುಅಲ್ಲಿಮರು ಆ ಜಮಾಅತಿನ ನಿಷ್ಠೆ ಮತ್ತು ವಿಶ್ವಾಸದ ಬಗ್ಗೆ ಹೇಳುತ್ತಾರೆ.

ನಮ್ಮ ಜಮಾಅತಿನಲ್ಲಿ ಮೊದಲ ಬಾರಿಗೆ MTA ಹಚ್ಚಿದಾಗ ಜನರು ಮೊದಲ ಬಾರಿಗೆ ಖಲೀಫರನ್ನು ನೋಡುತ್ತಲೇ ಅವರ ಕಣ್ಣುಗಳು ತೇವಗೊಂಡವು ಮತ್ತು ಅವರ ಮುಖಗಳು ಸಂತೋಷದಿಂದ ಅರಳಿದವು. **(ಬದರ್ ಉರ್ದು ವಾರಪತ್ರಿಕೆ 24 ಸೆಪ್ಟೆಂಬರ್ 2020)** **(ಮುಂದುವರಿಯುವುದು)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹೊಂದಿದಾಗ ಅವನ ಮಕ್ಕಳ ಪಾಲನೆ ಪೋಷಣೆಯ ಪ್ರಶ್ನೆ ಮುಂದೆ ಬರುತ್ತದೆ. ಒಬ್ಬ ಹೇಳುತ್ತಾನೆ ನನ್ನ ಮೇಲೆ ಮೊದಲೆ ತುಂಬ ಭಾರವಿದೆ, ಇನ್ನೊಬ್ಬ ಹೇಳುತ್ತಾನೆ ನಾನೂ ಅದೇ ಹೇಳ ಬಯಸುತ್ತೇನೆ. ಅಂದರೆ ತುಂಬ ಸಮಸ್ಯೆಗಳಿವೆ, ಮೂರನೆಯವ ಹೇಳುತ್ತಾನೆ ನನಗೂ ಈ ಪುಣ್ಯ ಗಳಿಸಬೇಕೆನಿಸುತ್ತದೆ ಆದರೆ ವಿವಶನಾಗಿದ್ದೇನೆ. ಹೀಗೆ ಹೇಳುತ್ತಾ ಒಬ್ಬೊಬ್ಬರಾಗಿ ಎಲ್ಲರೂ ಪಲಾಯನ ಮಾಡಲು ಇಚ್ಛಿಸುತ್ತಾರೆ. ಆದರೆ ಸಹಾಬರಲ್ಲಿ ಈ ರೀತಿ ಇರಲಿಲ್ಲ. ಅವರು ಪಾಲಾಯನ ಮಾಡಲು ಇಚ್ಛಿಸುತ್ತಿರಲಿಲ್ಲ ಬದಲು ಈ ಪುಣ್ಯ ಪಡೆಯಲು ಪ್ರಯತ್ನ ಶೀಲರಾಗಿರುತ್ತಿದ್ದರು. ಯಾವುದೇ ಸಮುದಾಯದಲ್ಲಿ ಈ ಸಂಧರ್ಭ ಸಿಕ್ಕಿದರೆ ಅವರು ಅನಾಥರನ್ನು ನಿರ್ಗತಿಕರನ್ನು ನೋಡಿಕೊಳ್ಳಲು ಅವರನ್ನು ಗೌರವಿಸಲು ಹಾತೊರೆಯುವರು. ಅವರ ಪಾಲನೆಪೋಷಣೆಯಲ್ಲಿ ಅವರಿಗೆ ಶಾಂತಿ ನೆಮ್ಮದಿ ದೊರೆಯುವುದು. ಅವರು ಈ ಅನಾಥರನ್ನು ತನ್ನ ಮಕ್ಕಳಂತೆಯೇ ಭಾವಿಸುವರು. ಆ ಸಮಯ ವಿಶ್ವಾಸ ಹೊಂದಿದ್ದರೂ ಆ ಸಮೂದಾಯ ಸಾಹಸ ಸಮುದಾಯವಾಗಿರುತ್ತದೆ. ಅದರೊಂದಿಗೆ ಯಾರಿಗಾದರೂ ಪರಲೋಕದಲ್ಲಿಯೂ ವಿಶ್ವಾಸವಿದ್ದರೆ ಜೀವಂತ ಅಲ್ಲಾಹನ ಮೇಲೆ ಭರವಸೆ ಇದ್ದರೆ ಈ ಎರಡೂ ಗುಣಗಳು ಅವನ ಹೃದಯವನ್ನು ಎಷ್ಟೊಂದು ಬಲಿಷ್ಠಗೊಳಿಸುತ್ತದೆ ಎಂದರೆ, ಮರಣದ ಹೆದರಿಕೆಯು ಅವನ ಮುಂದೆ ಸುಳಿಯುವುದೂ ಇಲ್ಲ.

ಯೂರೋಪಿಯನ್ ಸಮೂದಾಯಗಳಲ್ಲಿ ಕಾಣುವ ಸಾಹಸಕ್ಕೆ ಇದೇ ಕಾರಣವಾಗಿದೆ. ಅಲ್ಲಿಯ ಯುವಕರು ಭಾವಿಸುತ್ತಾರೆ ನಾವು ನಿಧನ ಹೊಂದಿದರೂ ನಮ್ಮ ಸಮೂದಾಯ ಅನಾಥರನ್ನು ವಿಧವೆಯರನ್ನು ನೋಡಿಕೊಳ್ಳುವುದು, ಹಾಗಾಗಿ ಮರಣ ಹೊಂದುವವನು ಕಿಂಚಿತ್ತು ಹೆದರುವುದಿಲ್ಲ, ತನ್ನ ಪ್ರಾಣವನ್ನು ತ್ಯಾಗ ಮಾಡುತ್ತಾನೆ.

ಈಮಾನ್(ವಿಶ್ವಾಸ) ಬೇರೆ ಮಾತಾಗಿದೆ ಅದು ಅಲ್ಲಾಹನ ಪ್ರವಾದಿಯ ಜೀವಂತ ದೃಷ್ಟಾಂತಗಳನ್ನು ಕಾಣುವವರಿಗೆ ಲಭಿಸುತ್ತದೆ. ಆದರೆ ಸಾಮುದಾಯಿಕ ನೀತಿ ಈ ರೀತಿಯ ದೃಢವಾದ ವಿಶ್ವಾಸವಿಲ್ಲದೆಯೂ ಸಮುದಾಯದ ಜನರಿಗೆ ಸಾಹಸ ಮತ್ತು ವೀರರನ್ನಾಗಿ ಮಾಡುತ್ತದೆ." **(ತಫ್‌ಸೀರೆ ಕಬೀರ್, ಸಂಪುಟ-2, ಪುಟ-497-498, ಮುದ್ರಣ ಖಾದಿಯಾನ್ 2010)**

*************

**ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

(ಮಲ್‌ಫೂಝಾತ್, ಸಂಪುಟ-5, ಪುಟ-354, ಮುದ್ರಣ ಖಾದಿಯಾನ್ 2003)

**ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.**

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ವಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗ್ರತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

(ಖುತ್‌ಬಾತೆ ಮಸ್‌ರೂರ್, ಸಂಪುಟ-3, ಪುಟ-687)

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**
**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.1, Thursday, 22 October 2020, Issue No. 41

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

**2019–2020 ನೇ ವರ್ಷದಲ್ಲಿ ಅಹ್ಮದಿಯಾ ಜಮಾಅತಿನ ಮೇಲೆ ಸುರಿಯುತ್ತಿರುವ ಅಸಂಖ್ಯಾತ ಅನುಗ್ರಹಗಳ ಮತ್ತು ಅವನ ಸಹಾಯದ ಮಹೋನ್ನತ ದೃಷ್ಟಾಂತಗಳ ವಿಶ್ವಾಸವರ್ಧಕ ವಿವರ**

**ಕಳೆದ ಒಂದು ವರ್ಷದಲ್ಲಿ 98 ದೇಶಗಳ 220 ಸಮುದಾಯಗಳಿಗೆ ಸೇರಿದ ಒಂದು ಲಕ್ಷದ ಹನ್ನೆರಡು ಸಾವಿರದ ನೂರ ಎಪ್ಪತ್ತ ಒಂಬತ್ತು (1,12,179) ಜನರು ಅಹ್ಮದಿಯತ್ ಅಂದರೆ ವಾಸ್ತವಿಕ ಇಸ್ಲಾಮಿನಲ್ಲಿ ಸೇರ್ಪಡೆ.**

**ಲೋಕದ ವಿವಿಧ ದೇಶಗಳಲ್ಲಿ ವಾಸಿಸುತ್ತಿರುವ ವಿವಿಧ ಸಮುದಾಯ, ವರ್ಣಗಳಿಗೆ ಸಂಬಂಧಿಸಿದ ಜನರು ಅಹ್ಮದಿಯತ್ ಅಂದರೆ ವಾಸ್ತವಿಕ ಇಸ್ಲಾಮ್ ಸ್ವೀಕರಿಸುವ ವಿಶ್ವಾಸ ವರ್ಧಕ ಘಟನೆಗಳು.**

**ಹಝ್ರತ್ ಮಸೀಹ್ ಮೌಊದ್(ಅ) ರವರ 16 ಗ್ರಂಥಗಳ ಹಿಂದಿ ಅನುವಾದ ಪ್ರಕಟಣೆ. ರೂಹಾನಿ ಖಝಾಯೀನ್ ಸಂಪುಟ 20ರ 6 ಗ್ರಂಥಗಳು ಮತ್ತು ತಫ್ಸೀರ್ ಕಬೀರ್ ಸಂಪುಟ ಒಂದರ ಅರಬಿ ಅನುವಾದ ಪೂರ್ಣಗೊಳಿಸಲಾಯಿತು.**

**ಅರೆಬಿಕ್, ರಷ್ಯನ್, ಚೈನಿಸ್, ಟರ್ಕಿಶ್, ಇಂಡೋನೇಷಿಯನ್, ಸ್ಪಾನಿಷ್ ಹಾಗೂ ಇತರ ವಿಭಾಗಗಳ (Desk) ಅಡಿಯಲ್ಲಿ ವಿವಿಧ ಗ್ರಂಥ ಹಾಗೂ ಪ್ರಬಂಧಗಳ ತಯಾರಿ ಹಾಗೂ ಪ್ರಕಟಣೆ, ಜಮಅ ಖುತುಬಗಳು ಮತ್ತು ಒಖಿಂ ಕಾರ್ಯಕ್ರಮಗಳ ಅನುವಾದ**

**ಲೋಕದಾದ್ಯಂತ ಇಸ್ಲಾಮಿನ ಶಾಂತಿಪೂರ್ಣ ಹಾಗೂ ನಿಜವಾದ ಸಂದೇಶದ ಪ್ರಚಾರ ಮತ್ತು ಪ್ರಸಾರಕ್ಕಾಗಿ ಒಖಿಂ ಎಲ್ಲ ಚಾನಲ್‌ಗಳ ಅದ್ವಿತೀಯ ಸೇವೆಗಳ ವಿವರ.**

**ಪ್ರಸಕ್ತ ವರ್ಷ 2 ಹೊಸ ರೇಡಿಯೋ Stationಗಳ ಹೆಚ್ಚಳ, MTA International ನ 24 ಗಂಟೆಗಳ ಪ್ರಸಾರ ಅಲ್ಲದೆ 84 ದೇಶಗಳಲ್ಲಿ ಟಿ.ವಿ ಮತ್ತು ರೇಡಿಯೋ ಚಾನಲ್‌ಗಳ ಮೇಲೆ 11,063 ಟಿ.ವಿ ಕಾರ್ಯಕ್ರಮಗಳ ಮೂಲಕ 6,842 ಗಂಟೆ, ಹಾಗೂ ರೇಡಿಯೋ ಮೂಲಕ 52 ಕೋಟಿ ಜನರೆಡೆಗೆ ಅಹ್ಮದಿಯತ್ ಅರ್ಥಾತ್ ವಾಸ್ತವಿಕ ಇಸ್ಲಾಮಿನ ಸಂದೇಶ ಪ್ರಸಾರವಾಯಿತು.**

**ಪ್ರಸಕ್ತ ವರ್ಷ 80 ದೇಶಗಳಲ್ಲಿ ಒಟ್ಟು ಒಂದು ಲಕ್ಷ 18 ಸಾವಿರ ನೌಮುಬಾಯೀನ್‌ಗಳೊಡನೆ ಸಂಪರ್ಕ ಸಾಧಿಸಲಾಯಿತು. 3,891 ಜಮಾಅತುಗಳಲ್ಲಿ 16,823 ನೌಮುಬಾಯಿಗಳಿಗೆ ತರಬೇತಿ class ಆಯೋಜಿಸಲಾಯಿತು. ಒಂದು ಲಕ್ಷಕ್ಕಿಂತ ಅಧಿಕ ನೌಮುಬಾಯೀನ್ ಈ ತರಬೇತಿಗಳಲ್ಲಿ ಭಾಗವಹಿಸಿದರು. 124 ಇಮಾಮರಿಗೆ ತರಬೇತಿ ನೀಡಲಾಯಿತು.**

**ತಹ್ರೀಕ್ ವಕ್ಫೆನೌ, Review of Religious, ಅಲ್–ಫಝುಲ್ International, ಸಾಪ್ತಾಹಿಕ ಅಲ್‌ಹಕಮ್, Press and media office (ಮುದ್ರಣ ಮತ್ತು ಮಾಧ್ಯಮ ಕಚೇರಿ) ಶೋಬ ಮಖ್ಜಾನೆ ತಸಾವೀರ್, ಅಹ್ಮದಿಯ ಆರ್‌ಕ್ಯೂಯ್ರುಝ್ ಮತ್ತು Research center, ಅಲ್–ಇಸ್ಲಾಮ್ ವೆಬ್‌ಸೈಟ್, ಅಹ್ಮದಿಯಾ ಟೆಲಿವಿಷಯನ್ ಹಾಗೂ ರೇಡಿಯೋ ಕಾರ್ಯಕ್ರಮ ಇನ್ನಿತರ ಸಂಕ್ಷಿಪ್ತ ವರದಿ.**

**International Associatioin of Ahmadiya Architects, ಮೂಲಕ ಇಲ್ಲಿಯವರೆಗೆ 19 ಮಾದರಿಯ ಗ್ರಾಮಗಳ ಸ್ಥಾಪನೆ ಮತ್ತು Humanity first ನ ಮೂಲಕ ಮಾನವೀಯ ಸೇವೆಯ ನಿಸ್ವಾರ್ಥ ಕಾರ್ಯಸಾಧನೆ ಇಲ್ಲಿಯವರೆಗೆ ಒಟ್ಟು 15 ಸಾವಿರ 315 ಬಡ ಜನರಿಗೆ ಉಚಿತವಾಗಿ ಕಣ್ಣಿನ ಆಪ್ರೇಶನ್ ಮಾಡಿಸಲಾಯಿತು.**

***ಜಲ್ಸ ಸಾಲಾನ ಯು.ಕೆ ಸಂದರ್ಭ ಸಯ್ಯದ್‌ನಾ ಅಮೀರುಲ್ ಮುಮಿನೀನ್ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅಬಿಅ) ರವರ ವಿಶೇಷ ಸಂಬೋಧನೆ, ದಿನಾಂಕ: 9 ಆಗಸ್ಟ್ 2020, 9 ಝುಹರ್ 1399 ಸೌರಮಾನ ಶಕೆ, ಸ್ಥಳ ಐವಾನೆ ಮಸ್ರೂರ್, ಇಸ್ಲಾಮಾಬಾದ್, ಟೆಲಿಫೋರ್ಡ್ (ಸಿರೆ) ಯು.ಕೆ.***

**ಸೂಚನೆ: ಈ ಸಂಬೋಧನೆಯ ಮೊದಲ ಭಾಗ ಹುಝೂರ್ ಅನ್ವರ್ (ಅಬಿಅ) 7 ಆಗಸ್ಟ್ 2020 ಜುಮುಅದಲ್ಲಿ ಸಂಬೋಧಿಸಿದರು. ಇದಕ್ಕಾಗಿ ಅಖ್ಬಾರ್ ಬದರ್ ವಾರಪತ್ರಿಕೆ ದಿನಾಂಕ 10 ಸೆಪ್ಟೆಂಬರ್ 2020 ಸಂಚಿಕೆ ಸಂಖ್ಯೆ 35ರಲ್ಲಿ ಓದಬಹುದು. (ಪತ್ರಿಕ ಬಳಗ)**

ಮೊನ್ನೆ ಖುತುಬದಲ್ಲಿ ನಾನು ತಿಳಿಸಿದಂತೆ ಜಲ್ಸ ಸಾಲಾನ ವರದಿಯ ಶೇಷ ಭಾಗ ಇಂದು ಪ್ರಸ್ತುತಪಡಿಸುವೆನು. ಇನ್‌ಶಾಅಲ್ಲಾಹ್, ಪ್ರಸಕ್ತ ವರ್ಷ ಅಲ್ಲಾಹನು ಜಮಾಅತಿನ ಮೇಲೆ ಕರುಣಿಸಿದ ಅನುಗ್ರಹಗಳ ಕುರಿತು ವಿವರಿಸುವೆನು. ತುಂಬ ಪ್ರಯತ್ನಪಟ್ಟು ವರದಿಯ ಸಾರಾಂಶ ತಯಾರಿಸಲಾಗಿತ್ತು. ಅದು ಸಹ ಪ್ರಸ್ತುತಪಡಿಸಲಾಗದು ಎಂದು ಭಾವಿಸಿ ಇನ್ನು ಸಂಕ್ಷಿಪ್ತಗೊಳಿಸಿದ್ದೇನೆ. ಅಂತೂ ಇಂದು ಮೊದಲು ಇಲಾಖಾ ವರದಿಗಳು, ವಿವಿಧ ಕೇಂದ್ರಿಯಾ ಇಲಾಖೆಗಳಿಂದ ಪ್ರಾರಂಭಿಸುತ್ತೇನೆ. ವಕಾಲತ್ ತಅಮೀಲ್ ವ ತನ್‌ಫಿಝ್ ಲಂಡನ್‌ನಲ್ಲಿದೆ. ಇದು ಭಾರತ, ನೇಪಾಳ ಮತ್ತು ಭೂತಾನಕ್ಕೆ ಸಂಬಂಧಿಸಿದ ಕಾರ್ಯಗಳ ಉಸ್ತುವಾರಿ ವಹಿಸಿಕೊಂಡಿದೆ. ಏನೆಲ್ಲ ನಿರ್ದೇಶನಗಳು ನಾನು ನೀಡಿರುತ್ತೇನೋ ಅದು ಅವರ ಮೂಕಲ ಅಲ್ಲಿಗೆ ತಲುಪಿಸಲಾಗುತ್ತಿದೆ. ಅವರದ್ದು ಬಹಳಷ್ಟು ಕಾರ್ಯಗಳಿವೆ. ಸಂಕ್ತಿಪ್ತವಾಗಿ ಹೇಳುತ್ತಿದ್ದೇನೆ.

ಈಗ ಖಾದಿಯಾನಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಎಲ್ಲಾ ಗ್ರಂಥಗಳನ್ನು ಹಿಂದಿಯಲ್ಲಿ ಅನುವಾದಿಸುವ ಕಾರ್ಯ ನಡೆದಿದೆ. ಅದರ ಉಸ್ತುವಾರಿ ಇಲ್ಲಿಯ ವಕಾಲತ್ ಶುಬದಿಂದ ಆಗುತ್ತದೆ. ಅಲ್ಲಾಹನ ಅನುಗ್ರಹದಿಂದ ಪ್ರಸಕ್ತ ವರ್ಷ ಇಲ್ಲಿಯವರೆಗೆ ನಾಝಿರ್ ಸಾಹಿಬ್ ನಶರ್ ವ ಇಶಾಅತ್ (ಮುದ್ರಣ ಮತ್ತು ಪ್ರಚಾರ ವಿಭಾಗ) ಅವರ ವರದಿಯ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೂ 16 ಗ್ರಂಥಗಳು ಇಂದು ಅನುವಾದವಾಗಿ ಮೊದಲ ಸಲ ಮುದ್ರಣಗೊಂಡಿದೆ. ಅದಾಗ್ಯೂ 21 ಗ್ರಂಥಗಳು ಇನ್ನು ಪ್ರಿಂಟಿಂಗ್, ಕಂಪೋಝಿಂಗ್, ಪ್ರೂಫ್ ರೀಡಿಂಗ್ ಮತ್ತು ಖಿಜತುಜತಿ ಹಂತದಲ್ಲಿವೆ. ಅವರಿಂದ ಮುದ್ರಿತವಾದ ಅರೆಬಿ ಖುರ್‌ಆನ್

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.